ಮಾಡಿ ಬಂದಿದ್ದೇನೆ. ಆದಷ್ಟು ಬೇಗ ಅದರ ಬಗ್ಗೆ ಕ್ರಮ ತೆಗೆದುಕೊಂಡು ನಾವು ನೀವು ಎಲ್ಲಾ ಒಟ್ಟಾಗಿ ಹೋಗಿ ಆ ಕೆಲಸವನ್ನು ಮಾಡೋಣ.

ಅಧ್ಯಕ್ಷರು: ಮಾನ್ಯ ಗೃಹಮಂತ್ರಿಗಳು ಉತ್ತರವನ್ನು ಮುಂದುವರೆಸಿ.

9. ನಿಯಮ 69ರ ಅಡಿಯಲ್ಲಿ ಮುಂದುವರೆದ ಚರ್ಚೆ.

ವಿಷಯ: ಇತ್ತೀಚೆಗೆ ಮೈಸೂರು ನಗರದಲ್ಲಿ ನಡೆದ ಕೋಮು ಗಲಭೆ ಮತ್ತೆ ಪೊಲೀಸ್ ಕಾರ್ಯಾಚರಣೆಯಿಂದಾಗಿ ಆಮಾಯಕರು ಸಾವಿಗೀಡಾಗಿರುವ ಬಗ್ಗೆ.

ಶ್ರೀ ವಿ.ಎಸ್.ಆಚಾರ್ಯ: ಮಾನ್ಯ ಅಧ್ಯಕ್ಷರೇ, ಏಪ್ರಿಲ್‌ನಲ್ಲಿ ನಡೆದಂಥ ಸಂದರ್ಭದಲ್ಲಿ ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರಾದ ನಮ್ಮ ಗ್ರಮೀಣಾಭಿವೃದ್ಧಿ ಸಚಿವರು ಮೀಟಿಂಗ್ ಮಾಡಲಿಕ್ಕೆ ಬೆಂಗಳೂರಿನಿಂದ ಅಲ್ಲಿಗೆ ಹೋದಾಗ ಇಲ್ಲ ಇದು ಚುನಾವಣೆ ಕಾಲ ಇಂಥ ಸಭೆಯನ್ನು ಮಾಡಬಾರದು ಪೊಲೀಸರಿಗೆ ಈ ಬಗ್ಗೆ ನಾವು ನಿರ್ದೇಶನ ಕೊಡುತ್ತೇವೆಂದು ಹೇಳಿದ್ದರಿಂದ ಆಗ ಮೀಟಿಂಗ್ ಮಾಡಲಿಕ್ಕಾಗಲಿಲ್ಲ ವಿನ: ಬೇರೆ ಯಾವುದೇ ಉದ್ದೇಶ ಇಲ್ಲ. ಅವರಿಗೆ ಚುನಾವಣೆಯ ನಿರ್ಬಂಧವಿದ್ದ ಕಾರಣ ಆ ಸಮಯದಲ್ಲಿ ಅವರಿಗೆ ಸಭೆಯನ್ನು ಮಾಡಲಿಕ್ಕಾಗಲಿಲ್ಲ. ಇನ್ನು ಒಂದು ವಿಷಯವನ್ನು ಬಹಳ ಕಳಕಳಿಯಿಂದ ಹೇಳಬಯಸುತ್ತೇನೆ. ಕಳೆದ ಜೂನ್‌ನಲ್ಲಿ ಯಡಿಯೂರಪ್ಪನವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರದಲ್ಲಿ ನಾವು ಅಧಿಕಾರಕ್ಕೆ ಬಂದ ದಿವಸದಿಂದ ಹಾಗೂ ಅದಕ್ಕೂ ಮುಂಚಿತವಾಗಿಯೂ ಅಲ್ಪಸಂಖ್ಯಾತ ಶಾಸಕರೂ ಇದ್ದರು, ಒಬ್ಬರನ್ನು ಸಚಿವರನ್ನಾಗಿ ಮಾಡುತ್ತೇವೆಂದು ಮಾತು ಕೊಟ್ಟಂತೆ ನಾವು ನಡೆದುಕೊಂಡಿದ್ದೇವೆ. Allocation ನಲ್ಲಿ ನಾವು ಯಾವುದೇ , ರೀತಿಯ ತಾರತಮ್ಯವನ್ನು ನಾವು ಮಾಡಿಲ್ಲ. ಎಲ್ಲರಿಗೂ ಸಮಾನ ಅವಕಾಶ ಸಿಗಬೇಕೆಂಬುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ಈ ಕಳಕಳಿಯ ಬಗ್ಗೆ ಈ bonafide ಬಗ್ಗೆ ದಯವಿಟ್ಟು ಯಾರೂ ಪ್ರಶ್ನೆ ಮಾಡುವುದು ಬೇಡ, ನಾನು ಆಗಲೇ ಹೇಳಿದ ಹಾಗೆ ಈ ಪಿಡುಗು ಈಗ ಪ್ರಾರಂಭವಾದುದಲ್ಲ, ಬಹಳ ಸಮಯದಿಂದಲೇ ಇದೆ, ಆದರೆ ಈಗ ಸ್ವಲ್ಪ ಕಡಿಮೆಯಾಗಿದೆ. ನಮ್ಮೆಲ್ಲರ ಪ್ರಯತ್ನ ಆಗುತ್ತಿದೆ, ಏನಾಗಿದೆಯೆಂದರೆ ಮೈಸೂರು economy tourism potential ಮೇಲೆ ಇದೆ. ಮೈಸೂರಿನಲ್ಲಿ ಬಹುಪಾಲು ಆರ್ಥಿಕತೆ ಟೂರಿಸಂ ಇಂಡಸ್ಟ್ರಿ ಮೇಲೆ ಇದೆ. ಅದಕ್ಕೆ ಧಕ್ಕೆ ತರಬೇಕು ಮತ್ತು ಈ ಸರ್ಕಾರ ಅಭಿವೃದ್ಧಿ ಕಡೆಗೆ, ಜನಕಲ್ಯಾಣದ ಬಗ್ಗೆ ನೂರಾರು ಹೊಸ ಕಾರ್ಯಕ್ರಮಗಳು, ರೈತರನ ಬಗ್ಗೆ ಇರುವಂಥ ಕಾರ್ಯಕ್ರಮಗಳು, Social infrastructrue like Education, Health and cinatation ಇದರ ಬಗ್ಗೆ Economical infrastructure like Road, Electricity, drinking water,

Irrigation ಇತ್ಯಾದಿಗಳ ಬಗ್ಗೆ ತೀವ್ರ ಗಮನ ಕೊಟ್ಟು ಮುಂದೆ ಹೋಗುತ್ತಿರುವಾಗ ಈ ಒಂದು ಚಟುವಟಿಕೆಗಳ ಗಮನವನ್ನು ದಿಕ್ಕು ತಪ್ಪಿಸಿ ಮಾಡಬೆಕು ಎನ್ನುವಂಥ ದೃಷ್ಟಿಯಿಂದ ಹೇಳಲಾಗಿದೆ.

ಶ್ರೀ ಸಿ.ಎಸ್.ನಾಡಗೌಡ: Home Minister (ಗೊಂದಲ) then it leads that there is a conspiracy, he should spell who is that conspirator. He is straight away accusing the other parties. You are not politicizing, as a whole you are.....

(ಗೊಂದಲ)

ಅಧ್ಯಕ್ಷರು: ಅವರು ಉತ್ತರ complete ಮಾಡಲಿ. ನೀವು ಅವಕಾಶ ಕೊಡಿ. ನೀವು ಮಾತನಾಡುವಾಗ ಅವರು ಸುಮ್ಮನೆ ಕುಳಿತಿರಲಿಲ್ಲವೇ?

(ಗೊಂದಲ)

ಶ್ರೀ ಬಿ. ರಮಾನಾಥ್ ರೈ: ಘಟನೆ ಎಲ್ಲಿಂದ ಪ್ರಾರಂಭವಾಯಿತು ಎನ್ನುವುದು, ವಿಚಾರ.

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು): ರಾಜ್ಯ ಸರ್ಕಾರದ ಗಮನವನ್ನು ದಿಕ್ಕು ಚ್ಯುತಿ ಮಾಡುವುದಕ್ಕೆ ಮತ್ತು ಒಳ್ಳೆಯ ಹೆಸರನ್ನು, ಕೆಡಿಸುವುದಕ್ಕೆ ಸ್ವಲ್ಪ image ಅನ್ನು tarnish ಮಾಡುವ ದುರುದ್ದೇಶದಿಂದ ಕೆಲವೊಂದು ವರ್ಗಗಳು, ಕೆಲವೊಂದು ದುಷ್ಕರ್ಮಿಗಳು ಇದರಲ್ಲಿ ಸೇರಿದ್ದಾರೆ ಎಂದು ಹೇಳುವಂಥದ್ದು ಒಂದು ಇದೆ.

(ಗೊಂದಲ)

ಈ ಸದನಕ್ಕೆ ಹೇಳುತ್ತೇವೆ. ಆದರೆ, ಮಾನ್ಯ ಸಭಾಧ್ಯಕ್ಷರೆ,.....

(ಗೊಂದಲ)

ಶ್ರೀ ಆರ್. ರೋಷನ್ ಬೇಗ್: ಯಾವ ವರ್ಗಗಳು ಎಂದು ನೀವು ಹೇಳಬೇಕು. You must tell.

(ಗೊಂದಲ)

ಅಧ್ಯಕ್ಷರು: ಮಾನ್ಯ ರೋಷನ್ ಬೇಗ್‌ರವರೆ, ಸುಮ್ಮನಿರಿ, ಅವರು ಉತ್ತರ complete ಮಾಡುವುದಕ್ಕೆ ಬಿಡಿ.

(ಗೊಂದಲ)

ಡಾ: ವಿ.ಎಸ್.ಆಚಾರ್ಯ: ಏಕೆ ಇಷ್ಟು ಆತುರ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ: ಅವರು ಮಾತನಾಡುವಾಗ ನಾವು ಸುಮ್ಮನೆ ಕುಳಿತಿದ್ದೆವು. ಸಚಿವರು ಉತ್ತರ ಕೊಟ್ಟರೆ ಉತ್ತರ ಕೇಳುವ ಸಂಯಮವೂ ಅವರಿಗೆ ಇಲ್ಲವೆಂದರೆ ಹೇಗೆ?

ಶ್ರೀ ಸಿ.ಎಸ್.ಪುಟ್ಟೇಗೌಡ: ಸುಮಾರು ಕಡೆ ಮುಟ್ಟುಗೋಲು ಹಾಕುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ನೆಹರೂ ಓಲೇಕಾರ್‌ರವರೇ, ಸುಮ್ಮನೆ ಕುಳಿತುಕೊಳ್ಳಿ. ಸಚಿವರು ಉತ್ತರ ಕೊಡುತ್ತಾರೆ. ಪುಟೇಗೌಡರೇ ಕುಳಿತುಕೊಳ್ಳಿ.

ಡಾ: ವಿ.ಎಸ್.ಆಚಾರ್ಯ: ಮಾನ್ಯ ಅಧ್ಯಕ್ಷರೆ, ರಾಷ್ಟ್ರದ ಬೇರೆ ಬೇರೆ ಕಡೆಗಳಲ್ಲಿ ಏನೇನು ಆಗುತ್ತಿದೆ? ಕಳೆದ ವರ್ಷ ಜುಲೈ 25ಕ್ಕೆ ಈ ಸದನ ನಡೆಯತಕ್ಕಂಥ ಸಂದರ್ಭದಲ್ಲಿ ಮಧ್ಯಾಹ್ನ ಒಂದು ಮುಕ್ಕಾಲು ಗಂಟೆ ಸಮಯಕ್ಕೆ ಆಘಾತಕಾರಿಯಾದಂಥ ಸುದ್ದಿ ಬಂತು. terroristಗಳು ಏಳು ಕಡೆಗಳಲ್ಲಿ ಎಂಟು ಬಾಂಬ್‌ಗಳನ್ನು ಸಿಡಿಸಿದರು. Terrorists used explosions. ನಮಗೆಲ್ಲರಿಗೂ ಗೊತ್ತಿದೆ. ಯಾರು ಅದರ ಹಿಂದೆ ಇದ್ದಾರೆ. ಯಾರ ಕೈವಾಡ ಏನು ಎನ್ನುವಂಥದ್ದು ನಮಗೆ ಗೊತ್ತಿದೆ. ಈ ರೀತಿ ರಾಷ್ಟ್ರದ ಬೇರೆ ಬೇರೆ ಕಡೆಗಳಲ್ಲಿ ಏನೇನು ನಡೆಯುತ್ತಿದೆ, ಅದರ ಬಗ್ಗೆ ಮಾಹಿತಿ ಕೇಂದ್ರ ಸರ್ಕಾರಕ್ಕೆ ಇದೆ. ನಮ್ಮ ಸರ್ಕಾರಕ್ಕೂ ಕೆಲವೊಂದು ಇದೆ. ಈ ಹಂತದಲ್ಲಿ ಮೈಸೂರಿನ ಬಗ್ಗೆ ನಾನು ಇದಕ್ಕಿಂಥ ಹೆಚ್ಚಿಗೆ ಹೇಳುವುದಕ್ಕೆ ಬಯಸುವುದಿಲ್ಲ ಎಂದು ನಾನು ಪ್ರಾರಂಭದಲ್ಲೇ ಹೇಳಿದ್ದೇನೆ. ಆದರೆ, ಯಾರ್‍ಯಾರು, ಅಲ್ಲಿದ್ದಂಥವರು, prohibitory orders, ಅಲ್ಲಿದ್ದಂಥ ಬೇರೆ ಬೇರೆ ಪ್ರಸಂಗಗಳನ್ನು ಉಲ್ಲಂಘನೆ ಮಾಡಿ ನಮ್ಮ ಪೊಲೀಸಿನವರ ಮೇಲೆ ಕೈಮಾಡಿದರು. ಸಾರ್ವಜನಿಕವಾಗಿ ಮುಗ್ಧರಿಗೆ ಉಪದ್ರವ ಕೊಟ್ಟರು, ಇದೆಲ್ಲದರ ವರದಿಯನ್ನು ಪ್ರತಿ ದಿವಸ ಕೇಂದ್ರಕ್ಕೆ ಕಳುಹಿಸುತ್ತಿದ್ದೇವೆ. ಕೇಂದ್ರ ಸರ್ಕಾರದ ವಿವೇಚನೆಗೆ ಆ ವಿಷಯವನ್ನು ಬಿಟ್ಟಿದ್ದೇವೆ. ಒಂದು ವಿಷಯವನ್ನು ಈ ಸದನಕ್ಕೆ ಭರವಸೆ ಕೊಡುತ್ತೇನೆ. ನಮ್ಮ ಎಲ್ಲ ಪೊಲೀಸ್ ಫೋರ್ಸ್‌ನ ಬಗ್ಗೆ ಮಾನ್ಯ ಸದಸ್ಯರು ಒಳ್ಳೆಯ ಮಾತನ್ನು ಹೇಳಿದ್ದಾರೆ. ನಮಗೂ ಹಾಗೂ ಎಲ್ಲರಿಗೂ ಅವರ ಮೇಲೆ ವಿಶ್ವಾಸವಿದೆ. ಅವರ ಯಾವುದೇ ಪ್ರತಿದಿವಸದ ಅವರ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವಂಥ ವಿಚಾರ ಯಾರಿಗೂ ಇಲ್ಲ. ಮುಕ್ತವಾಗಿ ಇದರಲ್ಲಿ ಯಾರು ದುಷ್ಕರ್ಮಿಗಳು ಇದ್ದಾರೆ ಅವರನ್ನು ಪತ್ತೆ ಹಚ್ಚಿ ಕಾನೂನಿನ ಕಕ್ಷೆಯೊಳಗೆ ತರುವಂಥ ಕೆಲಸವನ್ನು ನಾವು ಮಾಡುತ್ತೇವೆ ಮತ್ತು ಶಿಕ್ಷೆಗೆ ಗುರಿಪಡಿಸುವಂಥ ಕೆಲಸವನ್ನು ನಾವು ಮಾಡುತ್ತೇವೆ. ಮೈಸೂರು ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆ ಸಮರ್ಪಕವಾಗಿ ನಡೆಯುವುದಕ್ಕೆ ಬೇಕಾದಂಥ ಎಲ್ಲಾ ಕ್ರಮಗಳನ್ನು ನಾವು ಕೈಗೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿ, ಈ ಮೈಸೂರಿನ ಬಗ್ಗೆ ಏನಾದರೂ ಮಾಹಿತಿ ಅವರ ಹತ್ತಿರ ಇದ್ದರೆ ಅದನ್ನು ನಮಗೆ ಕೊಟ್ಟರೆ ನಾವು ಖಂಡಿತ ಅದನ್ನು ನಮ್ಮ ಈ ಪತ್ತೆ ಹಚ್ಚುವ ಕಾರ್ಯದಲ್ಲಿ ಉಪಯೋಗ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರೆ, ನಾವು ಅವರು ಕೂಡಿ ಈ ಒಂದು ಪರಿಸ್ಥಿತಿಯನ್ನು, ಸಮಾಧಾನ ಪರಿಸ್ಥಿತಿಗೆ ಬೇಕಾಗುವಂಥ ಮತ್ತು ಮುಂದೆ ಇಂತಹ ಪ್ರಸಂಗಗಳು ಬಾರದೇ ಇರುವ ಹಾಗೆ ನೋಡುವಂಥ ಕೆಲಸವಾಗಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು, ನಾವು ಇಷ್ಟೊಂದು ಅಲ್ಲಿ ನಡೆದಿರತಕ್ಕಂಥ ವಿಚಾರಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿ, ವಾಸ್ತವಿಕವಾದ ವಿಚಾರಗಳನ್ನು ಇಲ್ಲಿ ಇಟ್ಟಿದ್ದರೂ ಕೂಡ, ಇವರು judicial enquiryಗೆ ಒಪ್ಪಿಕೊಳ್ಳುತ್ತಾರೆ ಎಂದು ನಾವೆಲ್ಲಾ ನಿರೀಕ್ಷೆ ಮಾಡಿದ್ದೆವು. ಬಹಳ ಇಷ್ಟು ಉದ್ದ ಹೇಳಿಕೆ ಕೊಡುವ ಅಗತ್ಯವಿರಲಿಲ್ಲ. ನಮಗೂ ಡಿ.ಸಿ.ಯವರು ಒಂದು ಪತ್ರ ಬರೆದಿದ್ದಾರೆ. ಆ ರೀತಿ ಪತ್ರವನ್ನು ಇವರು ಇಲ್ಲಿ ಓದಿ ಬಿಟ್ಟಿದ್ದಾರೆ. ಅಲ್ಲಿ you have made out a case, how police have failed. ಏಪ್ರಿಲ್‌ನಿಂದ ಹಿಡಿದು ಜುಲೈವರೆಗೆ ಪೊಲೀಸ್‌ನವರು ಹೇಗೆ fail ಆಗಿದ್ದಾರೆ? April incident ನಲ್ಲಿ ಇವರು ಹೇಗೆ ನಿಷ್ಕ್ರಿಯರಾದರು? ಹೇಗೆ ಇವರು ನಿಷ್ಪಕ್ಷಪಾತವಾಗಿ ಆವತ್ತು ನಡೆದುಕೊಳ್ಳಲಿಲ್ಲ? ನಿಷ್ಪಕ್ಷಪಾತವಾಗಿ ನಡೆದುಕೊಂಡಿದ್ದರೆ, ಒಂದು ಗುಂಪಿನವರಿಗೆ non-bailable offence ಗಳನ್ನು ಹಾಕಿ ಎರಡೂವರೆ ತಿಂಗಳು ಅವರು ಜೈಲಿಗೆ ಹೋಗುವಂತೆ ಮಾಡಿ, ಇನ್ನೊಂದು ಗುಂಪಿಗೆ bailable offenceಗಳನ್ನು ಹಾಕಿ ಅವರೆಲ್ಲಾ ಜೈಲಿನಿಂದ ಹೊರಗಡೆ ಬರುವ ಹಾಗೆ ಮಾಡಿ, ಇದನ್ನು ಯಾರು ಮಾಡಿದವರು? ಇದನ್ನು ಮಾಡುವುದಕ್ಕೆ ಹೊರಗಡೆ ಶಕ್ತಿಗಳು ಬಂದಿದ್ದವೇ? ಬಾಹ್ಯ ಶಕ್ತಿಗಳು ಬಂದು ಮಾಡಿದವೇ? ನಿಮ್ಮ ಪೊಲೀಸ್‌ನವರೇ ಮಾಡಿದ್ದು, ನೀವೇ, ಸರ್ಕಾರವೇ ಮಾಡಿದ್ದು. ಅವರನ್ನು ಹತ್ತಿಕ್ಕತಕ್ಕಂಥ ಕಾರ್ಯಕ್ರಮವಾಗಿದ್ದರೆ, ಆವತ್ತು ವಾಸಿಮ್ ಖಾನ್ ಎಂಬುವವರು ಏಪ್ರಿಲ್ ನಾಲ್ಕನೇ ತಾರೀಖಿನಂದು ಸಾಯುತ್ತಾನೆ. ಇವತ್ತಿನವರೆಗೂ ಯಾರನ್ನೂ ಅರೆಸ್ಟ್ ಮಾಡಿದ್ದೀರಿ? ಅಲ್ಲಿ ಅಪರಾದಿಗಳು ಯಾರು? ಕೊಲೆ ಮಾಡಿದವರು ಯಾರು? It is a straight. ಅದು ಬೇರೆ incident. ಆ incident ನಲ್ಲಿ ಆವತ್ತು ಅವನು ಒಬ್ಬನೇ ಸತ್ತಿದ್ದು ಏನು? ಯಾರನ್ನೂ ಅರೆಸ್ಟ್ ಮಾಡಿದ್ದೀರಿ? ನೀವು ಪೊಲೀಸ್‌ನವರು ಬಹಳ efficient ಆಗಿದ್ದೀರಾ? ಏಪ್ರಿಲ್ ನಾಲ್ಕನೇ ತಾರೀಖಿನಿಂದ ಜುಲೈ ಎರಡನೇ ತಾರೀಖಿನವರೆಗೆ ಅರೆಸ್ಟ್ ಮಾಡುವುದಕ್ಕಾಗಲಿಲ್ಲವೇ? ಆ accused ಯಾರೂ ಎಂದು ಪತ್ತೆ ಹಚ್ಚುವುದಕ್ಕಾಗಲಿಲ್ಲ. Even today ಯಾರು ಎಂದು ಗೊತ್ತಿಲ್ಲ. ನಿಮಗೆ ಮೊನ್ನೆ ಎರಡನೇ ತಾರೀಖಿನಂದು ಸತ್ತಂಥ ಮೂರು ಜನರು ಅವರು ಯಾರು ಎಂದು ನಿಮಗೆ ಗೊತ್ತಾಗಲಿಲ್ಲ. ಅಲ್ಲಿ ಪೊಲೀಸ್ ನಿಮಗೆ, ಹುಲಿಗೆಮ್ಮ ದೇವಸ್ಥಾನದ ಸಮಿತಿಯವರು they have no right over the property. They are not disputing about the ownership. They have never claimed that; they are the owner of the property. Where Muslim people were constructing educational institution building. ಅವರು ಒಂದು ಲೆಟರ್ ಕೊಡುತ್ತರೆ. ಡಿ.ಸಿ.ಗೆ ಕಮೀಷನರ್‌ಗೆ ಕೊಡುತ್ತಾರೆ ಮತ್ತು ಮುನಿಸಿಪಾಲ್

ಕಮೀಷನರ್‌ಗೆ ಕೊಡುತ್ತಾರೆ, ನೀವು ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅಲ್ಲಿ ಕಟ್ಟುತ್ತಾ ಇದ್ದಂಥವರಿಗೆ modified plan ಕೊಟ್ಟು ಎಲ್ಲಾ ಮಾಡಿದ ಮೇಲೂ ಕೂಡ ನೀವು ಪೊಲೀಸ್‌ನವರಿಂದ protection ಅನ್ನು ಅವರಿಗೆ ಏಕೆ ಕೊಟ್ಟಿಲ್ಲ? What was your intension? ಪೋಲೀಸ್‌ನವರನ್ನೂ ಹಾಗೂ ಯಾರನ್ನೂ ಅಲ್ಲಿ ನೀವು ಇಡದೇ, ಇದ್ದರೆ ಏನರ್ಥ? What is the inference one could draw? Conspiracy ಇದೆ. who are the conspirators? Conspirator ಯಾರು ಎಂದು ಪೊಲೀಸ್‌ನವರಿಂದ ಬರುತ್ತದೆಯೇ? ನೀವು ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ ಹಾಕುತ್ತಿರಿ. ನಾಲ್ಕನೇ ತಾರೀಖು ನೀವು ಬಂದು ಹೋದ ಮೇಲೆ, ಐದನೇ ತಾರೀಖು ಯಾರು ಬಂದ್ ಕರೆದವರು? what action you have taken against them? District authority ಯವರು ಅವರಿಗೆ ಬಂದ್ ಮಾಡುವುದಕ್ಕೆ permission ಕೊಟ್ಟಿದ್ದಾರೆಯೇ? ಅದರಲ್ಲಿ ಯಾರು involve ಆಗಿದ್ದಾರೆ? ಬಂದ್‌ಗೆ ಕರೆ ಕೊಟ್ಟು 144 section violate ಆಗಲಿಲ್ಲವೇ? 144 section violate ಮಾಡುತ್ತಾರೆ? ಅವರು ಯಾರು violate ಮಾಡಿದವರು? ಸರ್ಕಾರ ಸುಮ್ಮನೆ ಇರಬೇಕಾದರೆ, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳದೇ ಇರಬೇಕಾದರೆ, ಅವರು ಏನು ಅಂದುಕೊಳ್ಳುತ್ತಾರೆ, ಜನರ ಮನಸ್ಸಿಗೆ ಏನು ಬಂದಿದೆ ಎಂದರೆ, ನೀವು ಅಧಿಕಾರಕ್ಕೆ ಬಂದಮೇಲೆ ನಾವು ಏನು ಮಾಡಿದರೂ ಕೂಡ ನಮಗೆ ರಕ್ಷಣೆಯಾಗಿದೆ ಎನ್ನುವ ಭಾವನೆಯಿಂದ ಆ ರೀತಿ ಮಾಡಿದ್ದಾರೆ. ಅವರಿಗೆ permission ಕೊಟ್ಟಿದ್ದೀರಾ? ಯಾರೂ persmission ಕೊಟ್ಟಿಲ್ಲ. ಅವತ್ತು ನಾನು ಡಿ.ಸಿ.ಯನ್ನು ಕೇಳಿದೆ. I was their on that day. ಏನ್ರಿ ಗಲಾಟೆ ಮಾಡುತ್ತಿದ್ದಾರೆ. ಶಾಲಾ ಮಕ್ಕಳೆಲ್ಲಾ ಓಡಿ ಬರುತ್ತಿದ್ದಾರೆ ಎಂದು ಕೇಳಿದೆ. ಎಲ್ಲಾ ಕಡೆ ಬಸ್‌ಗಳನ್ನು ಅಡ್ಡ ಹಾಕಿ ಅವರನ್ನು ಕೆಳಕ್ಕೆ ಇಳಿಸಿ ಓಡಿಸುತ್ತಿದ್ದಾರೆ ಎಂದು ಕೇಳಿದೆ. ನೀವು ಜಾಗದಲ್ಲಿ ಕೂತಿದ್ದೀರಿ ಎಂದರೆ ಅವರು ಏನೂ ಹೇಳಲಿಲ್ಲ. ಆವತ್ತು ಎಲ್ಲಾ ಶಾಲಾ ಕಾಲೇಜುಗಳು ಬಂದ್ ಆದವು ಆ ಬಸ್‌ಗೆ ಸಂಬಂಧಪಟ್ಟಂತೆ ರೆಕಾರ್ಡ್ ಆಗಿಲ್ಲ. Why they were allowed to take out a procession, called a Bundh ಆಗ ನೀವು ಗೃಹ ಸಚಿವರು ಸಾಯಂಕಾಲ ಬಂದ ಮೇಲೆ next day ನಡೆದಿರುವುದು. ಆವತ್ತೇ ರಾತ್ರಿ ಗಿರಿಧರ್‌ನ ಗಲಾಟೆಯಲ್ಲಿ ಅವರಿಗೆ ಏಟು ಬಿದ್ದ ಮೇಲೆ ಅವತ್ತೇ ರಾತ್ರಿ ಕರೆದಿದ್ದಾರೆ. ಅಂಗಡಿ ಮುಗ್ಗಟ್ಟುಗಳನ್ನು ಬಲಾತ್ಕಾರವಾಗಿ ಮುಚ್ಚಿಸಿದ್ದಾರೆ. ಅವರ ಮೇಲೆ ಏನಾದರೂ action ತೆಗೆದುಕೊಂಡಿದ್ದೀರಾ? ಏನೂ action ತೆಗೆದುಕೊಳ್ಳಲಿಲ್ಲ. ಇನ್ನೊಂದು Popular Front of Indiaದ್ದು, I don't know. ಅವರ background ಏನು

ಎಂದು ನನಗೆ ಗೊತ್ತಿಲ್ಲ ಅಥವಾ ಅವರು ಏನಾದರೂ ಪ್ರಚೋದನೆ ಮಾಡಿದ್ದರೆ, judicial enquiry ಮಾಡಿ. popular Front of India ದವರು ಏನಾದರೂ ಪ್ರಚೋದನೆ ಮಾಡಿದ್ದರೆ, judicial enquiry ಮಾಡಿ, ಅವರು ಪ್ರಚೋದನೆ ಮಾಡಿದ್ದಾರೆಯೇ? Popular Front of India ದವರೇ ಕಾರಣವೆಂದು. ಅವರು ಕಾರಣವೇ ಅಥವಾ ಮುತಾಲಿಕ್ ಅಲ್ಲಿ 5ನೇ ತಾರೀಖು ಹೋಗಿ ಭಾಷಣ ಮಾಡಿದ್ದಾರಲ್ಲಾ ಅದು ಕಾರಣವೇ? ಅವರು instigate ಮಾಡಿರುವುದು ಕಾರಣವೇ? ಇವೆಲ್ಲಾ ಹೇಳಬೇಕಲ್ಲವೇ? ಜೂನ್ 5ನೇ ತಾರೀಖು ಹೋಗಿದ್ದಾರೆ. ಆವತ್ತು ನೀವು ಏಕೆ ಅವರನ್ನು arrest ಮಾಡಲಿಲ್ಲ? How he was allowed? Disturbed area ಕ್ಕೆ ಅವರನ್ನು ಏಕೆ ಬಿಟ್ಟಿರಿ? ಅಲ್ಲಿ ಪೊಲೀಸರು ಇದ್ದರು. ಕ್ಯಾತಮಾನಹಳ್ಳಿಯಲ್ಲೊಂದು ಮಸೀದಿ ಇದೆ. ಮಾನ್ಯ ಶ್ರೀನಿವಾಸ್ ಪ್ರಸಾದ್ ಅವರು ಹೇಳಿದರು. ಬಹಳ ವರ್ಷಗಳಿಂದ ಅಲ್ಲಿ ಮುಸಲ್ಮಾನವರು ಇದ್ದಾರೆ ಹಿಂದುಗಳು ಜಾಸ್ತಿ ಇದ್ದಾರೆ, ಮುಸಲ್ಮಾನರು ಕಡಿಮೆ ಇದ್ದಾರೆ. ಏಪ್ರಿಲ್ ತಿಂಗಳು ಆದ ಮೇಲೆ ಅಲ್ಲಿ ಒಂದು ಜೀಪ್ ನಿಂತುಕೊಳ್ಳುತ್ತಿತ್ತು. ಆ ಜೀಪ್ ಎಲ್ಲಿ ಹೋಯಿತು? ಏಕೆ ಆವತ್ತು ಒಂದನೇ ತಾರೀಖಿನಲ್ಲಿ ಇರಲಿಲ್ಲ. ಆ Building ಕಟ್ಟುವ ಕಡೆ ನೀವು ಪೊಲೀಸರನ್ನು ಏಕೆ ಹಾಕಿರಲಿಲ್ಲ? ಅವತ್ತು ಪೊಲೀಸ್ನವರನ್ನು ಏಕೆ withdraw ಮಾಡಿದರು? ಯಾವಾಗಲೂ ಗರುಡ vehicle ಅಲ್ಲಿ ನಿಂತುಕೊಂಡಿರುತ್ತಿತ್ತು. On that particular day it was not there. ಇದಕ್ಕೆ ಕಾರಣ ಯಾರು? ಇವೆಲ್ಲಾ ಹೇಗೆ ಗೊತ್ತಾಗಬೇಕು? Is it not a clear case where judicial enquiry is necessary? ಸುಮ್ಮನೆ ಹೇಳುವುದಕ್ಕಾಗುವುದಿಲ್ಲ. ಹಿಂದಿನ incidentನಲ್ಲಿ ಇದು ಮಾಡಿದ್ದರು ಅದು ಏನೂ ಆಗಲಿಲ್ಲ. ಅವರು ಇನ್ನೇನೋ ಮಾಡಿದ್ದರು ಅದು ಆಗಲಿಲ್ಲ. CBI enquiry ಮಾಡಿದ್ದರು ಅದು ಏನು ಆಗಲಿಲ್ಲವೆಂದರೆ ನಾವು ಯಾವುದರ ಮೇಲೆ ನಂಬಿಕೆ ಇಟ್ಟುಕೊಳ್ಳುವುದು? ಸತ್ಯ ಹೊರಗಡೆ ಬರಬೇಕು. We believe in judicial enquiry, we are living in Democracy. we believe in Democracy, we bellieve in Judiciary. If we don't believe... ಮತ್ತೆ ಜನರನ್ನು ನಂಬಿಸುವುದು ಹೇಗೆ? ನಮಗೆ Judicial ನಲ್ಲಿ ನಂಬಿಕೆ ಇಲ್ಲ, Democracy ಯಲ್ಲಿ ನಂಬಿಕೆ ಇಲ್ಲ, ಏನೂ ಆಗುವುದಿಲ್ಲ. ಆದರಿಂದ ಏನೂ ಮಾಡುವುದಕ್ಕಾಗುವುದಿಲ್ಲವೆಂದರೆ ಹೇಗೆ? ನಾವು ಒಂದು orderly society ಅನ್ನು ನಿರ್ಮಾಣ ಮಾಡುವುದಕ್ಕಾಗುವುದಿಲ್ಲ. ಯಾರು ಹಿಂದೆಗಡೆ ಇದ್ದಾರೆ ಗೊತ್ತಾಗಬೇಕು. ಇವತ್ತು ಹಂದಿ ತೆಗೆದುಕೊಂಡು ಬಂದು ಹಾಕಿರುವುದು evidence ಗಳೆಲ್ಲವೂ ಇವೆ. ಇಬ್ಬರು ವ್ಯಕ್ತಿಗಳು ಹಂದಿಯನ್ನು 1,500 ರೂಪಾಯಿಗೆ

ತೆಗೆದುಕೊಂಡು ಬಂದು ಕತ್ತರಿಸಿ ಅಲ್ಲಿ ಹಾಕಿದ್ದಾರೆ. ಅವರು ಯಾರು ಎಂದು ಪೊಲೀಸಿನವರಿಗೂ ಗೊತ್ತಿದೆ, ಅವರ ಹೆಸರುಗಳೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಏಕೆ ಅದನ್ನು ಮುಚ್ಚಿಡುತ್ತೀದ್ದೀರಿ? ಅದಕ್ಕೋಸ್ಕರ ನಾವು ಪೊಲೀಸ್ ಅವರ ಹತ್ತಿರ investigation ಮಾಡಿಸುತ್ತೇವೆ ಅವರಿಂದ ನ್ಯಾಯ ಒದಗಿಸಿಕೊಡುತ್ತೇವೆ, ಅವರಿಂದ ಸತ್ಯ ಹೊರಗೆ ಬರುತ್ತದೆ ಎಂದು ಹೇಳುವುದರಲ್ಲಿ ಏನೂ ಹುರುಳಿಲ್ಲ. ಸುಮ್ಮನೆ ಈ ತರಹ ಮಾಡಿದರೆ ಏನೂ ಆಗುವುದಿಲ್ಲ. ಯಾರೋ conspirate ಮಾಡಿದ್ದಾರೆ ಇದರಲ್ಲಿ ಏನೋ ಕರಾಮತ್ತು ನಡೆಯುತ್ತಿದೆ. ಏನೇನೋ ಪದಗಳನ್ನು ಈಗಾಗಲೇ ಬಳಸುತ್ತಾರಲ್ಲಾ, ಸಂಚು, ಪಿತೂರಿ, ಷಡ್ಯಂತ್ರ ಅದನ್ನು ರೂಪಿಸುವವರು ಯಾರೂ? ನಾವೋ, ನೀವೋ, ಇನ್ಯಾರೋ? ಅದು ಗೊತ್ತಾಗಬೇಕಲ್ಲವೇ? ಆ ಷಡ್ಯಂತ್ರಗಳ ಹಿಂದೆ ಇರುವವರು ಯಾರು? instigate ಮಾಡುವವರು ಯಾರು? ಇದಕ್ಕೆಲ್ಲಾ ಏನೆಂದು ಹೇಳಬೇಕು? ಗಿರಿಧರ್ ಅವರಿಗೆ ಏಟು ಬಿದ್ದ ತಕ್ಷಣವೇ ಹಿಂದು ಸಂಘಟನೆಗಳೆಲ್ಲಾ ದೊಡ್ಡದಾಗಿ ಮೈಸೂರಿನಲ್ಲಿ ಗಲಾಟೆ ಮಾಡಿದರೆ ಇನ್ನೊಂದು ವರ್ಗದ ಮೇಲೆ ಏನಾಗುತ್ತದೆ? ಹೇಗೆ ನಿಮ್ಮ ಮೇಲೆ ನಂಬಿಕೆ, ವಿಶ್ವಾಸ ಬರುತ್ತದೆ? ಇದು ಕಾರಣವಾಗುತ್ತದೆ. ನಿಮ್ಮ ಮೇಲೆ ನಂಬಿಕೆ ಬರುವುದಿಲ್ಲ. ನಮಗೆ ರಕ್ಷಣೆ ಇಲ್ಲವೆಂದಾಗುತ್ತದೆ. ಏಪ್ರಿಲ್ 4ನೇ ತಾರೀಖು ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಂತಹ ಘಟನೆಗೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯನ್ನು ಏನಾದರೂ ಬಿಗಿ ಮಾಡಿದ್ದೀರಾ? ಎಷ್ಟು ಪೊಲೀಸ್ ಬಂದೋಬಸ್ತು ಕೊಟ್ಟಿದ್ದೀರಾ? ಏನೂ ಮಾಡೇ ಇಲ್ಲ. ಹೆಚ್ಚುವರಿ ಪೊಲೀಸ್ ಹಾಕಿದ್ದೀರಾ? 87 ಜನ ಆ ಕಡೆ arrest ಮಾಡಿಬಿಟ್ಟು, ಈ ಕಡೆ 8 ಜನ arrest ಮಾಡಿಬಿಟ್ಟು, ನೀವು ಜೈಲಿಗೆ ಹೋಗಿ, ನೀವು ಈ ಕಡೆ ಹೊರಗಡೆ ಬನ್ನಿ ಎಂದು ಹೇಳಿದರೆ ಯಾರು ನಂಬುತ್ತಾರೆ? ಯಾರಿಗೆ ವಿಶ್ವಾಸ ಬರುತ್ತದೆ? ಆದ್ದರಿಂದ I demand judicial enquiry ಮಾಡಲೇಬೇಕು. ನಾವು ನಿಮ್ಮ ಉತ್ತರದಿಂದ ತೃಪ್ತರಾಗಿಲ್ಲ. ನೀವು ಏನೋ ಮುಚ್ಚಿಡುವಂಥ ಪ್ರಯತ್ನವನ್ನು ಮಾಡುತ್ತಿದ್ದೀರಿ. ಇದು ಇನ್ನೂ ಹೆಚ್ಚು ಸಂಶಯಗಳಿಗೆ ಆಸ್ಪದವಾಗುತ್ತದೆ. ಇವತ್ತು ನಾವೆಲ್ಲರೂ ಈ ರಾಜ್ಯದಲ್ಲಿ ಶಾಂತಿ ನೆಲಸಬೇಕು, ಮತ್ತೆ ಮತ್ತೆ ಈ ತರಹ ಘಟನೆಗಳು, ಗಲಭೆಗಳು ಮರುಕಳಿಸಬಾರದು. once for all ಇದಕ್ಕೆ ಕೊನೆ ಹಾಡಬೇಕೆಂದು ಆಗುವುದಾದರೆ, ಸತ್ಯ ಆಚೆಗೆ ಬರಬೇಕು. ಸತ್ಯ ಎಲ್ಲರಿಗೂ ಗೊತ್ತಾಗಬೇಕು, ಇಡೀ ಕರ್ನಾಟಕದ ಜನತೆಗೆ ಗೊತ್ತಾಗಬೇಕು ಮತ್ತು ಮೈಸೂರು ನಗರದಲ್ಲಿ ಶಾಂತಿ ನೆಲಸಬೇಕು. ಎಲ್ಲರಿಗೂ ಕೂಡ ವಿಶ್ವಾಸ ಬರುವಂತ ರೀತಿಯಲ್ಲಿ ಆಗಬೇಕು. ಈ ಸರ್ಕಾರ ನಿಷ್ಪಕ್ಷಪಾತವಾಗಿ ನಡೆದುಕೊಂಡಿದೆ ಎಂದು ಎಲ್ಲರಿಗೂ ಗೊತ್ತಾಗಬೇಕು. That is what we want. ದಯಮಾಡಿ ನಾನು ಮತ್ತೊಮ್ಮೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. Judicial enquiry ಗೆ ಆದೇಶ

ನೀಡಲು ನೀವು prestige ಮಾಡಿಕೊಳ್ಳಬೇಡಿ. ಒಪ್ಪಿಕೊಳ್ಳಿ ಸತ್ಯ ಹೊರಗಡೆ ಬರಲಿ. ಯಾರು ಇದರಲ್ಲಿ ಭಾಗಿಯಾಗಿದ್ದಾರೆ ಅವರಿಗೆ ಶಿಕ್ಷೆಯಾಗಲಿ. ಯಾರಾದರೂ ಆಗಲಿ, whoever he may be whether he belongs to this group or that group... ಈ ಸಂಘಟನೆ, ಆ ಸಂಘಟನೆ ಯಾವುದೇ ಸಂಘಟನೆ ಆಗಿರಲಿ. ಯಾವುದೇ ಸಂಘಟನೆ ಇರಬಹುದು. ಆ ಸಂಘಟನೆ ತಪ್ಪು ಮಾಡಿದ್ದರೆ ನೀವು ಬ್ಯಾನ್ ಮಾಡಬೇಕೋ ಅಥವಾ ಏನು ಮಾಡಬೇಕು ಅದನ್ನು ಮಾಡೋಣ. ಶ್ರೀರಾಮಸೇನೆಯವರೋ, ಭಜರಂಗದಳದವರೋ ಅಥವಾ popular Front of Indiaದವರೋ ಯಾರೆಂದು ಗೊತ್ತಾಗಲಿ. ಆದುದರಿಂದ ದಯಮಾಡಿ judicial enquiry ಮಾಡಬೇಕೆಂದು ನಾನು demand ಮಾಡುತ್ತಿದ್ದೇನೆ.

ಅಧ್ಯಕ್ಷರು: ಒಂದು ನಿಮಿಷ, ಮಾನ್ಯ ಬಾಲಕೃಷ್ಣರವರೆ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಅದನ್ನು ಕೇಳೋಣ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನಾನು ಹೇಳಿದ ಮೇಲೆ ಒಟ್ಟಿಗೆ ಹೇಳಬಹುದಲ್ಲಾ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ಒಂದು ನಿಮಿಷ, ಸನ್ಮಾನ್ಯ ಅಧ್ಯಕ್ಷರೆ, investigation ನಡೆಯುತ್ತಿದೆ. ನಮ್ಮ ಪೊಲೀಸ್ ಅಧಿಕಾರಿಗಳು ಅಲ್ಲಿ ಕ್ಯಾಂಪ್ ಮಾಡಿದ್ದರೆ. ಪೊಲೀಸ್ ಉನ್ನತಾಧಿಕಾರಿಗಳ ಮೇಲೆ stab ಮಾಡುವಂಥ ಪ್ರಯತ್ನ ಮಾಡಿದರೂ ಸಹ ಸಹಿಸಿಕೊಂಡು ಶಾಂತವಾಗಿ ವರ್ತಿಸುತ್ತಿದ್ದಾರೆ. ನಾವು ಇಲ್ಲಿ ಚರ್ಚೆ ಮಾಡಬೇಕಾದಂಥಹ ವಿಷಯ, ಈ KFD, Popular Front of India ಯಾರೇ ಇರಲಿ, ಕಾನೂನು ಚೌಕಟ್ಟಿನಲ್ಲಿ ಹಿಂದೆ ನಡೆದ ಘಟನೆಯ ಆಧಾರದ ಮೇಲೆ ಯಾರನ್ನಾದರೂ ಬಂಧನ ಮಾಡಿ ಪೊಲೀಸರು ಕ್ರಮ ತೆಗೆದುಕೊಂಡಾಗ, ಇದು ಸರಿಯಲ್ಲ ಬಿಡಬೇಕೆಂದು ಹೇಳಿ, 144 section ಇದ್ದಾಗ, ಸಾವಿರಾರು ಜನ ಕೇರಳದಿಂದ, ಬೇರೆ ಬೇರೆ ರಾಜ್ಯಗಳಿಂದ ಬರುತ್ತಾರೆ. ಪ್ರತಿಪಕ್ಷದ ನಾಯಕರು ನೀವೇ ಅದೇ ಜಾಗದವರು. ಇಡೀ ಜಗತ್ತಿಗೆ ಗೊತ್ತಿರುವಂಥದ್ದು, ಮಧ್ಯಮದಲ್ಲಿ ಧಾರವಾಹಿಯಂತೆ ಎಲ್ಲಾ ವಿವರಗಳು ಬಂದಿವೆ. ಆ ಘಟನೆ ನಡೆದಂತಹ ದಿವಸ, ಎರಡನೇ ತಾರೀಖು, ಕೆಲವೇ ಗಂಟೆಗಳಲ್ಲಿ ಸಾವಿರಾರು ಜನ ಚಾಕು ಚೂರಿ ಹಿಡಿದುಕೊಂಡು ರಸ್ತೆಗೆ ಬರುತ್ತಾರೆ. ದಾಖಲೆಗಳಿವೆ, ವಿಡೀಯೋ ರೆಕಾರ್ಡ್ ಮಾಡಿದ್ದೇವೆ. ಎಲ್ಲಾ ದಾಖಲೆಗಳು ನಮ್ಮ ಹತ್ತಿರ ಇವೆ. ಏಕೆ ಸನ್ಮಾನ್ಯ ಗೃಹ ಸಚಿವರು ಶಾಂತ ರೀತಿಯಲ್ಲಿ ಕೆಲವೇ ಮಾತುಗಳನ್ನಾಡಿ ಮುಗಿಸುತ್ತಿದ್ದಾರೆಂದರೆ, ಮೈಸೂರು ಇನ್ನೂ ಪ್ರಕ್ಷುಬ್ದ ಸ್ಥಿತಿಯಲ್ಲಿದೆ ನಿಮಗೆ ಗೊತ್ತಿದೆ. ಈ ಸಂದರ್ಭದಲ್ಲಿ ಈ ಮನೆಯಿಂದ ಒಂದು message ಏನು ಹೋಗಬೇಕು ಅಂದರೆ ನಾವು ನೀವು ಸೇರಿ, ಈ ಕೋಮು ದಳ್ಳುರಿ ನಡೆಸುವಂತಹ ಯಾರೇ ಇರಬಹುದು, ಅವರು ಬಹುಸಂಖ್ಯಾತ ಹಿಂದೂಗಳು ಇರಬಹುದು, ಅಲ್ಪಸಂಖ್ಯಾತರು ಇತರೆ

ಜನಾಂಗದವರು ಇರಬಹುದು, ಯಾರಿಗೂ ರಕ್ಷಣೆ ಕೊಡುವಂಥ ಪ್ರಶ್ನೆ ಇಲ್ಲ. ಯಾರು ಈ ಶಾಂತಿ ಸುವ್ಯವಸ್ಥೆಯನ್ನು ಹಾಳು ಮಾಡುವಂತಹ ವ್ಯವಸ್ಥಿತವಾದ ಪಿತೂರಿ, ಷಡ್ಯಂತ್ರ ಮಾಡುತ್ತಿದ್ದಾರೆ, ನಾವು ನೀವು ಒಟ್ಟಾಗಿ ಇದನ್ನು ಎದುರಿಸಬೇಕಾಗಿದೆ. ಇಂತಹ ಘಟನೆಗಳು ಇನ್ನು ಮುಂದೆ ರಾಜ್ಯದಲ್ಲಿ ನಡೆಯುವುದಿಲ್ಲ, ನಡೆಯುವುದಕ್ಕೆ ಬಿಡುವುದಿಲ್ಲ ಎನ್ನುವ message ಅನ್ನು ಈ ಮನೆಯ ಮೂಲಕ ಕೊಡಬೇಕಾಗಿದೆ. Investigation stage ನಲ್ಲಿ ಯಾರು ಹಂದಿಯ ತಲೆಯನ್ನು ತೆಗೆದು ಅಲ್ಲಿ ಹಾಕಿದ್ದಾರೆ, ಈ ಗಲಭೆಗೆ ಕಾರಣವಾಯಿತು ಅನ್ನುವುದರಿಂದ ಹಿಡಿದು, ಆ 2ನೇ ತಾರೀಖಿನಲ್ಲಿ ಯಾರ್ಯಾರು ಈ ಕೊಲೆ ಸಂಬಂಧ ಬೇರೆ ಬೇರೆ ಘಟನಾವಳಿಗಳಿಗೆ ಕಾರಣರಾದರು, ಮತ್ತೆ ಮೊನ್ನೆ ಮೈಸೂರಿನಲ್ಲಿ 9ನೇ ತಾರೀಖು ಈ ಅಧಿವೇಶನ ಪ್ರಾರಂಭವಾಗುವ ಮೊದಲನೇ ದಿವಸವೇ 144 ಸೆಕ್ಷನ್ ಇದ್ದಾಗ, ನಿಮಗೆ ಗೊತ್ತಿರುವ ಹಾಗೆ ಮೈಸೂರಿಗೆ ಸಾವಿರಾರು ಜನ ಪ್ರವಾಸೋದ್ಯಮಿಗಳು ಬರುತ್ತಾರೆ. ಈ ರೀತಿ first time in Karnataka history, ಮೈಸೂರಿನಂತಹ ನಗರದಲ್ಲಿ ಇಷ್ಟು ದೊಡ್ಡಪ್ರಮಾಣದಲ್ಲಿ ಕೇರಳದಿಂದ, ಬೇರೆ ಬೇರೆ ರಾಜ್ಯಗಳಿಂದ ಬಂದಿರತಕ್ಕಂಥವರು ಎಲ್ಲಾ ವಿಡಿಯೋ ಕ್ಯಾಸೆಟ್ ಇದೆ, ರೆಕಾರ್ಡ್ ಆಗಿರುವ ದಾಖಲೆಗಳಿವೆ. Spot ನಲ್ಲಿದ್ದವರನ್ನು arrest ಮಾಡಿದ್ದಾರೆ. ಇಲ್ಲೊಂದು ಮಾತು ಬಂತು, ಒಂದೇ ಕೋಮಿನವರನ್ನು arrest ಮಾಡಿದ್ದೀರೆಂದು. ಯಾರು ಬಂದು 144 ಸೆಕ್ಷನ್‌ಅನ್ನು ದಿಕ್ಕರಿಸಿ, ಅವತ್ತು ಪೊಲೀಸ್ ಅಧಿಕಾರಿಗಳಿಗೆ ಚಾಕು ಚೂರಿ ಇನ್ನಿತರೆ ಮಾರಕಾಸ್ತ್ರದಿಂದ ಹೊಡೆದರು. ಆ ಸಂದರ್ಭದಲ್ಲಿ ಕೆಲವರ ಬಂಧನವಾಗಿದೆ. ಯಾರ್ಯಾರು spot ನಲ್ಲಿದ್ದರೋ ಅವರ ಬಂಧನವಾಗಿದೆ. ಏನಾಗಿದೆ ಪರಿಪಾಠ ಸನ್ಮಾನ್ಯ ಸಿದ್ದರಾಮಯ್ಯನವರೆ, ವಿರೋಧ ಪಕ್ಷದ ನಾಯಕರೇ ನಮ್ಮ ಇಲಾಖೆಯ ಅಧಿಕಾರಿಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏನೇ ಘಟನೆ ನಡೆಯಲಿ, ಎಲ್ಲರಿಗೂ ಸಮಾನವಾಗಿ ಒಂದಷ್ಟು ಜನ arrest ಮಾಡಿ, ತಿಪ್ಪೆ ಸಾರಿಸುವಂಥ ಕೆಲಸವನ್ನು ನಾವು ಕಾಣುತ್ತಿದ್ದೆವೆ. ಯಾರು ತಪ್ಪು ಮಾಡಿದ್ದಾರೆ ಅವರನ್ನು sack ಮಾಡಬೇಕು ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತದ್ದು ಬಹುಶ: ಇದನ್ನು ತಾವು ಒಪ್ಪಿಕೊಳ್ಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ನಾನು ನಿಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, judicial enquiry ಮಾಡುವುದಕ್ಕೆ ಇದು stage ಅಲ್ಲ. ಪೂರ್ತಿ investigation ಅಗಲಿ, ಸತ್ಯ ಈಚೆಗೆ ಬರಲಿ. ನಿಮಗೆ ಗೊತ್ತಿರುವ ಹಾಗೆ ಈ ಕೋಮುಗಲಭೆ ಎನ್ನುವುದು ನಮ್ಮ ಸಮಾಜಕ್ಕೆ ಹಿಡಿದ ದೊಡ್ಡ ಪಿಡುಗಾಗಿದೆ. ಇದು ವ್ಯವಸ್ಥಿತವಾಗಿ ನಡೆದುಕೊಂಡು ಬಂದಿದೆ. ನೀವೇ ಹೇಳಿದ ಪ್ರಕಾರ, ನಮ್ಮ ರಾಜ್ಯ ಶಾಂತಿ ಮತ್ತು ಸುವ್ಯವಸ್ಥೆಗೆ ಹೆಸರಾದಂಥದ್ದು. ಆದರೆ, ಕಳೆದ ಹತ್ತು ವರ್ಷಗಳಲ್ಲಿ ಕೋಮುಗಲಭೆಗಳಲ್ಲಿ 26 ಜನ ಸತ್ತಿದ್ದಾರೆ. 1,140 ಜನರಿಗೆ

ಗಾಯವಾಗಿದೆ. 126 ಘಟನೆಗಳು ನಡೆದಿವೆ. ಇದು ಗೃಹ ಇಲಾಕೆಯಿಂದ ನಿಮಗೆ ಸಿಕ್ಕಿರುವ ಮಾಹಿತಿ ನಿಮಗೂ ಗೊತ್ತಿರುವಂಥದ್ದು. ನಿನ್ನೆ ಮೊನ್ನೆ ಅಲ್ಲ. ಏಕೆ ಈ ತರಹ ನಡೆಯುತ್ತಿದೆ.? ದಸರಾ ಹತ್ತಿರ ಬರುತ್ತಿದೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಅದ್ಧೂರಿಯಿಂದ ನಡೆಯಬೇಕು, ಕಳೆದ ವರ್ಷ ನಿಮ್ಮೆದುರಿಗೇ ನಾಡಹಬ್ಬವಾದ ದಸರಾ ವಿಜೃಂಭಣೆಯಿಂದ ನಡೆದಿದೆ. ರಾಜ್ಯ ಶಾಂತವಾಗಿರುವ ಇಂತಹ ಸಂದರ್ಭದಲ್ಲಿ ಸಿದ್ದರಾಮಯ್ಯನವರೆ, ಎಲ್ಲಿಯೋ ವ್ಯವಸ್ಥಿತವಾದ ಒಂದು ಪಿತೂರಿ ಇದೆ. ಈ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕು. ಒಳ್ಳೆಯ ಆಡಳಿತ ಕೊಡುತ್ತಿರುವ ಈ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆನ್ನುವಂತಹ ಷಡ್ಯಂತ್ರ ನಡೆಯುತ್ತಿದೆ. ಅದನ್ನು ಬಿಟ್ಟರೆ ಬೇರೇನೂ ಇಲ್ಲ. ಶಿವಕುಮಾರ್‌ರವರೆ, ಅದಕ್ಕೋಸ್ಕರ ನಾನು ಇಷ್ಟೇ ಹೇಳಲು ಇಚ್ಛಿಸುತ್ತೇನೆ. ಈ ಕುರಿತಾದ ಇನವೆಸ್ಟಿಗೇಶನ್ ನಡೆಯುತ್ತಿದೆ. ಈ ಸಮಯದಲ್ಲಿ Judicial Enquiry ಅಗತ್ಯವಿಲ್ಲ. ನಮ್ಮ ಇಲಾಖೆಯ ಉನ್ನತಾಧಿಕಾರಿಗಳು, ಗೃಹ ಸಚಿವರು ಮತ್ತು ಪೊಲೀಸ್ ಇಲಾಖೆ ಬಗ್ಗೆ ನಮಗೆ ವಿಶ್ವಾಸವಿದೆ. ಸ್ವಲ್ಪ ಸಹಕರಿಸಿ. ಎಲ್ಲಾ ಸತ್ಯಗಳು ಈಚೆಗೆ ಬರುತ್ತದೆ. ಅಪರಾಧಿಗಳು ಯಾರೇ ಇದ್ದರೂ ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಸಿದ್ದರಿದ್ದೇವೆ. ಆದರೆ, ಈ ಮನೆಯಿಂದ karnataka Forum for Dignity(KFD) ಮತ್ತು Popular Front of India(PFI) ಸಂಘಟನೆಗಳ ಬಗ್ಗೆ ಸರಿಯಾದ message ಹೋಗದಿದ್ದರೆ, ಇವರನ್ನು ರಕ್ಷಿಸುವುದಕ್ಕೆ ನಾವ್ಯಾರೂ ಇಲ್ಲಿ ಇಲ್ಲ. ಯಾರೇ ತಪ್ಪು ಮಾಡಿದ್ದರೂ ನಮಗೆ ಶಿಕ್ಷೆ ಕಾದಿದೆ ಎಂಬ message ಹೋಗದಿದ್ದರೆ ತಪ್ಪಾಗುತ್ತದೆಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಇನ್ನೂ ಬೇರೇನೂ ಮಾತನಾಡುವುದಿಲ್ಲ.

(ಗದ್ದಲ)

ಶ್ರೀ ಸಿದ್ದರಾಮಯ್ಯ: ಹಂದಿ ಮಾಂಸವನ್ನು ಯಾರು ಹಾಕಿದ್ದಾರೆ ಎನ್ನುವುದಕ್ಕೆ ಎವಿಡೆನ್ಸ್ ಇದೆ. ನಾವು ಯಾರ ಪರವಾಗಿಯೂ ವಕಾಲತ್ತು ಹಾಕುವುದಿಲ್ಲ. ಈಗ ಅರೆಸ್ಟ್ ಮಾಡಿದ್ದೀರಿ, ಅವರು ಯಾವ ಸಂಘಟನೆಗೆ ಸೇರಿದ್ದಾರೆಂಬುದೂ ಗೊತ್ತಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸಿದ್ದರಾಮಣ್ಣನವರೆ, ಒಂದು ನಿಮಿಷ. ಪ್ರತಿಪಕ್ಷ ನಾಯಕರಿಗೆ ಒಂದು ಮಾತು ಹೇಳಲು ಇಚ್ಛಿಸುತ್ತೇನೆ. ಹಂದಿ ತಲೆ ಕಡಿದು ಅಲ್ಲಿ ಹಾಕಿರುವಂತಹವರು ಯಾರು, ಅವರು ಯಾವುದೇ ಸಂಘಟನೆ ಪರವಾಗಿರಲಿ, ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ. ನಾವು ಇನ್‌ವೆಸ್ಟಗೇಶನ್ ಮಾಡುತ್ತೇವೆ. ಮಾಹಿತಿ ಸಿಗಲಿ, ಮಾಹಿತಿ ಸಿಗುತ್ತಿದೆ. ಮಾಹಿತಿ ಸಿಕ್ಕಿದ ನಂತರ ಆತ ಯಾರೇ ಇದ್ದರೂ ಆತನ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಆತನನ್ನು ಬಂದಿಸುವುದಕ್ಕೆ ಯಾವುದೇ ಕಾರಣಕ್ಕೂ ಹಿಂದು-ಮುಂದು

ನೋಡುವುದಿಲ್ಲ. ಇನ್‌ವೆಸ್ಟಿಗೇಶನ್ ನಡೆಯುತ್ತಿದೆ. ಬಹುಶ:, ಸತ್ಯ ಸಂಗತಿಗಳು ಬಂದ ತಕ್ಷಣ ನಿಮ್ಮ ಗಮನಕ್ಕೆ ತಾವು ತರುವವರಿದ್ದೇವೆ. ಯಾರೇ ಇಂತಹ ಕಿಡಿಗೇಡಿಗಳನ್ನು ನಾವು ರಕ್ಷಿಸುವುದಕ್ಕೆ ಸಿದ್ದರಿಲ್ಲ. ಅವರು ಯಾವುದೇ ಸಂಘಟನೆಗೆ ಸೇರಿರಲ್ಲಿ, ಅವರು ಕಾಂಗ್ರೆಸ್‌ಗೆ ಸೇರಿರಲಿ, ಜೆ.ಡಿ.(ಎಸ್)ಗೆ ಸೇರಿರಲಿ, ಬಿ.ಜೆ.ಪಿ.ಗೆ ಸೇರಿರಲಿ, ಯಾವುದೇ ಪಕ್ಷಕ್ಕೆ ಸೇರಿರಲಿ, ಯಾರೇ ಬೆಂಬಲಿಗರಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಸಿದ್ದರಿದ್ದೇವೆ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಆದರೆ, ಉದ್ದೇಶಪೂರ್ವಕವಾಗಿ ಯಾರೇ ಇರಬಹುದು, ಹಂದಿ ತಲೆಯನ್ನು ಅಲ್ಲಿ ಹಾಕಿ ಲಾಭ ಮಾಡಿಕೊಂಡು, ಗೊಂದಲವುಂಟು ಮಾಡಿದರೆ ನಾವು ಸಹಿಸುವುದಿಲ್ಲ. ಅವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಈ ಭರವಸೆಯನ್ನು ನಾನು ಈ ಮನೆಯಲ್ಲಿ ನಿಮಗೆ ಕೊಡುತ್ತಿದ್ದೇನೆ.

ಸಿದ್ದರಾಮಯ್ಯ....ಇದೆಲ್ಲವನ್ನೂ ಮುಚ್ಚಿಕೊಂಡು "ಪಿತೂರಿ ಇದೆ, ಸರ್ಕಾರಕ್ಕೆ ಮಸಿ ಬಳಿಯುವುದಕ್ಕೆ..." ಎಂದರೆ....ನೀವೇ ಮಸಿ ಬಳಿದುಕೊಳ್ಳುತ್ತೀರಷ್ಟೆ.

ಶ್ರೀ ಡಿ.ಕೆ.ಶಿವಕುಮಾರ್: ಈಗ ತಮ್ಮ ಕೈಯಲ್ಲಿ ಸರ್ಕಾರ ಇದೆ, ದಂಡವೂ ಇದೆ, ತಾವು ಧರ್ಮಾಧಿಕಾರಿಯೂ ಆಗಿದ್ದೀರಿ, ದಂಡಾಧಿಕರಿಯಾಗಿದ್ದೀರಿ, ಎಲ್ಲವೂ ಆಗಿದ್ದೀರಿ. ತಮ್ಮ ಪೊಲೀಸರು ತಮಗೆ ಎಲ್ಲಾ ಮಾಹಿತಿಗಳನ್ನೂ ಕೊಟ್ಟಿದ್ದಾರೆ. ಏನು ಮಾಹಿತಿಗಳನ್ನು ಕೊಟ್ಟಿದ್ದಾರೋ, ಅವೆಲ್ಲವೂ ಮಾಧ್ಯಮಗಳಲ್ಲಿ ಪ್ರಕಟಗೊಂಡಿದೆ, ಮಾಧ್ಯಮಗಳಲ್ಲಿ ಈ ಕುರಿತಾದ ದಾಖಲೆಗಳಿವೆ. ಇದನ್ನು ಯಾರು ಮಾಡಿದ್ದಾರೆಂಬ ಬಗ್ಗೆಯೂ ನಿಮಗೆಲ್ಲರಿಗೂ ಗೊತ್ತಿದೆ. ಇದರಲ್ಲಿ ಸತ್ಯ ಏನಿದೆ, ಹೆಸರುಗಳನ್ನು, ಅವರ ಹಿನ್ನೆಲೆಯನ್ನು ತಾವು ಈ ಸದನಕ್ಕೆ ಹೇಳುವುದಕ್ಕೆ ಮುಚ್ಚಿಕೊಳ್ಳುತ್ತಿದ್ದೀರಿ. ಇದು ಒಂದು. ಎರಡನೆಯದು, ಮಾನ್ಯ ಮುಖ್ಯಮಂತ್ರಿಗಳೆ, ಈಗ ನಿಮಗೊಂದು ಫೋಟೋ ಕಳುಹಿಸಿಕೊಡುತ್ತೇನೆ. "ಪ್ರಜಾವಾಣಿ" ಪತ್ರಿಕೆಯಲ್ಲಿ ಬಂದಿರುವ ಫೋಟೋ ಇದಾಗಿದೆ. ಒಬ್ಬ ಕಾರ್ಯಕರ್ತನ ಮೇಲೆ ಸುಮರು 8–9 ಜನರು ಮಚ್ಚು, ದೊಣ್ಣೆ ಹಿಡಿದುಕೊಂಡು ಹೊಡೆಯುತ್ತಿದ್ದಾರೆ. ಅದರ ಎಲ್ಲಾ ಫೋಟೋಗಳಿವೆ. ಒಬ್ಬನನ್ನೂ ನಿಮ್ಮಿಂದ ಅರೆಸ್ಟ್ ಮಾಡುವುದಕ್ಕಾಗಲಿಲ್ಲವಲ್ಲ? ನೀವು ಪೊಲೀಸರನ್ನು weak ಮಾಡುತ್ತಿದ್ದೀರಲ್ಲ. ಈ ರಾಜ್ಯದಲ್ಲಿ ಪೊಲೀಸ್ ಇಲಾಖೆಗೆ ಎಷ್ಟು ಗೌರವವಿತ್ತು, ಅವರು ಯಾವ ರೀತಿ ಕೆಲಸ ಮಾಡುತ್ತಿದ್ದರು, ಪೊಲೀಸರು ಫ್ರೀ ಆಗಿ ಕೆಲಸ ಮಾಡಲು ನೀವು ಅವರನ್ನು ಬಿಡುತ್ತಿಲ್ಲವಲ್ಲ. ನೀವು ಯಾರನ್ನು ರಕ್ಷಿಸುತ್ತಿದ್ದೀರಿ? ಷಡ್ಯಂತ್ರವೆಂದು ಹೇಳಿ. ಕಾಂಗ್ರೆಸ್ ಪಕ್ಷದ ಮೇಲೆ, ಹಾಕಿದ್ದೀರಿ. ಯಾರು ತಪ್ಪಿತಸ್ಥರಿದ್ದಾರೆ. ಅವರನ್ನು ಅರೆಸ್ಟ್ ಮಾಡಿ. ನಮ್ಮನ್ನು ಯಾರನ್ನಾದರೂ ಅರೆಸ್ಟ್ ಮಾಡಿ. ಇಲ್ಲವೇ ಎಂಎಲ್‌ಎ ಅವರು responsible ಇದ್ದರೆ, ಅವರನ್ನು ಅರೆಸ್ಟ್ ಮಾಡಿ. ಮಾತೆತ್ತಿದರೆ ಷಡ್ಯಂತ್ರ, ಪಿತೂರಿ ಎನ್ನುತ್ತೀರಲ್ಲ, ಯಾರ ಪಿತೂರಿ? ಇಲ್ಲಿರುವುದು ಮೂರು ಪಕ್ಷಗಳು. ಅವರು ಮಾಡಬೇಕು ಇಲ್ಲವೇ ನಾವು ಮಾಡಬೇಕು, ಇಲ್ಲವೇ ನೀವು ಮಾಡಬೇಕು.

(ಗದ್ದಲ)

ಶ್ರೀ ಡಿ.ಕೆ.ಶಿವಕುಮಾರ್: Responsibilityಯನ್ನು ನೀವು ಒಪ್ಪಿಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು: ಯಾರು ಪಿತೂರಿ ಮಾಡುತ್ತಿದ್ದಾರೆಂಬುದರ ಬಗ್ಗೆಯೇ ಈಗ ತನಿಖೆ ಮಾಡುತ್ತಿರುವುದು.

ಶ್ರೀ ಡಿ.ಕೆ.ಶಿವಕುಮಾರ್: ಕುಂಬಳಕಾಯಿ ಕಳ್ಳ ಎಂದರೆ, ನೀವೇಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದೀರಿ?

ಒಬ್ಬ ಮನ್ಯ ಸದಸ್ಯರು: ಯಾರು ಅನ್ಯಾಯ ಮಾಡಿದ್ದಾರೆಂಬುದು ತನಿಖೆಯಿಂದ ಗೊತ್ತಾಗುತ್ತದಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಒಬ್ಬನನ್ನೂ ಅರೆಸ್ಟ್ ಮಾಡುವುದಕ್ಕಾಗಲಿಲ್ಲವೆಂದರೆ, ನೀವು ಪೊಲೀಸ್ ಸಿಸ್ಟಮ್ ಅನ್ನು ಹಾಳು ಮಾಡುವುದಕ್ಕೆ ಹೊರಟಿದ್ದೀರಾ? ಬಿಡಿ, ಯಾವ ಕಾರ್ಯಕರ್ತರಾದರೇನು? ಆಡಳಿತ ಪಕ್ಷ ಕಾರ್ಯಕರ್ತನೋ, ವಿಪಕ್ಷದ ಕಾರ್ಯಕರ್ತನೋ, ನಿಮ್ಮ ಪಕ್ಷದ ಅಭಿಮಾನಿಯೋ, ನಮ್ಮ ಪಕ್ಷದ ಅಭಿಮಾನಿಯೋ, ಒಟ್ಟಿನಲ್ಲಿ ರಾಜ್ಯ ಉಳಿಯಲಿ. ನಾವು ಕೋ-ಅಪರೇಷನ್ ಕೊಡಲು ತಯಾರಿದ್ದೇವೆ. ಈ ರಾಜ್ಯಕ್ಕೆ ಏನು ಇಮೇಜ್ ಇದೆ, ಅದು ಹಾಳಾಗುತ್ತಿದೆ. ನಿಮಗೆ ಏನು ಕೋ-ಅಪರೇಶನ್ ಬೇಕೋ, ಅದನ್ನು ಕೊಡುತ್ತೇವೆ. ಸತ್ಯವನ್ನು ಬಯಲಿಗೆಳೆಯಿರಿ. ಈಗ ರೈತರ ಗಲಾಟೆ ನಡೆಯಿತು. ನಿಮ್ಮ ಕಾರ್ಯಕರ್ತನೇ ಸತ್ತ. ನಿಜವಾಗಿಯೂ ಆತ ರೈತನಾಗಿದ್ದ. ನಾವು ಇಲ್ಲವೆಂದು ಹೇಳುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು: ಆತ ಕಾರ್ಯಕರ್ತನಲ್ಲವೆಂದು ಹೇಳಿದರು.

ಶ್ರೀ ಡಿ.ಕೆ.ಶಿವಕುಮಾರ್: ಆತ ಕಾರ್ಯಕರ್ತನಲ್ಲ. ಕೊನೆಗೆ ಡೆಪ್ಯುಟಿ ಕಮೀಷನರ್ ಅವರು ಹೋಗಿ ಆತ ರೈತನಲ್ಲವೆಂದು ಅಫಿಡವಿಟ್ ಫೈಲ್ ಮಾಡಿದರು. ಅತನ ಕುಟುಂಬದವರಿಗೆ ಕೆಲಸ ಕೊಡಬೇಕೆಂದು ನಾವು ಆರ್ಡರ್ ಮಾಡಿದ್ದೇವೆ. ದುಡ್ಡು ಕೊಟ್ಟಿದ್ದೇವೆ. ಎಲ್ಲಾ ಪಕ್ಷದವರೂ ಹೋಗಿ ಹೂವಿನ ಹಾರ ಹಾಕಿದ್ದೇವೆ. ಆದರೆ, ಆತನನ್ನು ರೈತನೇ ಅಲ್ಲವೆಂದು ಬಿಟ್ಟರು! ಆದುದರಿಂದ, ನಾವು ಹೇಳುತ್ತಿರುವುದೇನೆಂದರೆ, ಇದನ್ನು hide ಮಾಡಿಕೊಳ್ಳಲು ಹೋಗಬೇಡಿ. ಜನರಿಗೆ ಸತ್ಯಾಂಶ ತಿಳಿಸಿ. ಈ ಮನೆಗೆ ತಿಳಿಸಿ, ನಿಮಗೆ ಸಹಕಾರ ಕೊಡುತ್ತೇವೆ. Judicial Enquiry ಏಕೆ ಆರ್ಡರ್ ಮಾಡಬಾರದು? ಇದರಿಂದ ಏನಾಗುತ್ತದೆ? ಅದರಲ್ಲಿ ಅಳವಾಗಿ ಅಡಗಿರುವುದಾದರೂ ಏನಿದೆ?

ಅಧ್ಯಕ್ಷರು: ಇಬ್ಬರು ವಿರೋಧ ಪಕ್ಷದ ನಾಯಕರುಗಳು ಹೇಳಿದ್ದಾರೆ. ಇನ್ನು ಸಾಕು.

ಶ್ರೀ ಸಿದ್ದರಾಮಯ್ಯ: ಅಧ್ಯಕ್ಷರೆ, ಒಂದೇ ಮಾತು. we will give all cooperation. ನಾಲ್ಕು ಜನರು ಸತ್ತಿದ್ದಾರೆ. ತಾವು ಹಿಂದೆ ವಿರೋಧ ಪಕ್ಷದ

ನಾಯಕರಾಗಿದ್ದಿರಿ, ಆ ಕಾಲದಲ್ಲಿ ನೀವು ನೋಡಿದ್ದೀರಲ್ಲ. ಪಾಪ! ನಾಲ್ಕು ಜನರು ಸತ್ತಿದ್ದಾರೆ.

ಅಧ್ಯಕ್ಷರು: ನಿಮಗೆಲ್ಲರಿಗೂ ಇನ್‌ಸಿಸ್ಟ್ ಮಾಡಿದ್ದೇನೆ. ಅವರು ಒಪ್ಪಿಕೊಂಡಿದ್ದಾರೆ. ಆ ಕುರಿತು ಎನ್‌ಕ್ವೆರಿ ಮಾಡಿಸುತ್ತೇನೆಂದು ಹೇಳುತ್ತಿದ್ದಾರೆ. ಈಗ ವಿಷಯವನ್ನು ಮುಗಿಸೋಣ.

ಶ್ರೀ ಟಿ.ಬಿ.ಜಯಚಂದ್ರ: ಅಧ್ಯಕ್ಷರೆ, ಏನಾಗಿದೆಯೆಂದರೆ, ಹೋಮ್ ಮಿನಿಸ್ಟರ್ ಆಗಿರುವ ಡಾ:ವಿ.ಎಸ್.ಆಚಾರ್ಯರವರು ಹೋಮ್ ಮಿನಿಸ್ಟರ್ ಆಗಿ ಉತ್ತರಿಸಲಿಲ್ಲ. ಗಾಯ ಆಗಿದೆ, ಟಿಂಕ್ಚರ್ ಹಚ್ಚಿದ್ದೇವೆ, ಮುಲಾಮು ಹಚ್ಚಿದ್ದೇವೆ, ಬ್ಯಾಂಡೇಜ್ ಹಾಕಿದ್ದೇವೆಂದು ಒಬ್ಬ ಡಾಕ್ಟರ್ ಆಗಿ ಉತ್ತರ ಕೊಟ್ಟರು! ಅದಕ್ಕೆ ನೀವೊಂದು ಬ್ಯಾಂಡೇಜ್ ಹಾಕಿರುವುದು ಬಿಟ್ಟರೆ ಬೇರೆ ಇನ್ನೇನು ಹಾಕಿದ್ದೀರಿ? ಇವತ್ತಿನ ಚರ್ಚೆಯಲ್ಲಿ ನಾವು ಭಾಗವಹಿಸಿ ಹೇಳಿರುವುದೇನೆಂದರೆ, ಇದು ನಿನ್ನೆ ಮೊನೆ ನಡೆದ ಘಟನೆಯಲ್ಲ. ಏಪ್ರಿಲ್ 1ರಿಂದಲೂ ನಡೆದಿರುವ ಘಟನೆಯಾಗಿದೆ.

ಅಧ್ಯಕ್ಷರು: ಈಗ ಚರ್ಚೆಯನ್ನು ಪುನ: ಮುಂದುವರೆಸುವ ಅವಶ್ಯಕತೆಯಿಲ್ಲ. ಈ ವಿಷಯವನ್ನು ನಿಮ್ಮ ನಾಯಕರೆಲ್ಲರೂ ಈಗಾಗಲೇ ಪ್ರಸ್ತಾಪಿಸಿದ್ದಾರೆ. ಇದೇ ವಿಷಯವನ್ನು ಮತ್ತೆ ಮುಂದುವರೆಸುವುದು.....

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಅವರನ್ನೂ ನೀವು ಅರೆಸ್ಟ್ ಮಾಡಲಿಲ್ಲ. ಪೊಲೀಸರ ವೈಫಲ್ಯದಿಂದಾಗಿ tension create ಆಗಿ ಇದೆಲ್ಲವೂ ಆಗಿದ್ದು. ಅಲ್ಲಿನ ಒಂದು civil dispute ಏನಿತ್ತು....

ಅಧ್ಯಕ್ಷರು: ಈಗ ಪುನ: subject ಅನ್ನು repeat ಮಾಡುವ ಅವಶ್ಯಕತೆಯಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದೆಲ್ಲವನ್ನೂ clear cut ಆಗಿ ಕೇಳಿದ್ದೀರಿ. ನೀವು ರಾತ್ರಿ ಹತ್ತು ಗಂಟೆವರೆಗೂ ಇದೇ ವಿಷಯವನ್ನು ಎಳೆದುಕೊಂಡು ಹೋಗುತ್ತಿರಾ? ಎಲ್ಲಿಯವರೆಗೆ ಇದೇ ವಿಷಯವನ್ನು ಮಾತನಾಡುವುದು? ಈಗ ವಿರೋಧ ಪಕ್ಷದ ನಾಯಕರು ಮಾತನಾಡಿದರು, ಸ್ಪಷ್ಟೀಕರಣ ಕೇಳಿದರು. ನಾನು ಅವಕಾಶ ಕಲ್ಪಿಸಿಕೊಟ್ಟೆ. ಇದು ಒಳ್ಳೆಯದಲ್ಲ. ಇನ್ನು ಸಾಕು.

ಶ್ರೀ ಟಿ.ಬಿ.ಜಯಚಂದ್ರ: ಖಂಡಿತವಾಗಿಯೂ ಒಳ್ಳೆಯದಾಗುವುದಿಲ್ಲ. ತಮಗೂ, ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ದಯಮಾಡಿ ಯಾವುದೇ ಒಂದು ಪ್ರೆಸ್ಟಿಜ್ ಮೇಲೆ ನಿಲ್ಲುವುದು ಬೇಡ. ನೀವು ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಿ ಇವತ್ತು ಪೊಲೀಸರಿಂದ ವೈಫಲ್ಯವಾಗಿದ್ದರೆ, ಅವರಿಗೆ ಶಿಕ್ಷೆಯಾಗುತ್ತದೆ. ಇದರಲ್ಲಿ ಪೊಲೀಸರ ವೈಫಲ್ಯ ಇಲ್ಲದಿದ್ದರೆ, ಆ ವೈಫಲ್ಯಕ್ಕೆ ಕಾರಣವಾಗಿರುವವರನ್ನು, ಅವರು ಯಾರೆಂಬುದು ಗೊತ್ತಾಗಬೇಕಾದರೆ, ಸಚಿವ ಸಂಪುಟಕ್ಕೂ ಗೊತ್ತಾಗಬೇಕಾದರೆ,

ನ್ಯಾಯಾಂಗ ತನಿಖೆಯಿಂದ ಮಾತ್ರ ಸಾಧ್ಯ. ನಾನು ಮತ್ತೆ ಮತ್ತೆ ಹೇಳಬೇಕಾಗಿಲ್ಲ. ತಾವು ಪ್ರೆಸ್ಟಿಜ್ ಮೇಲೆ ನಿಲ್ಲಬೇಡಿ, ನ್ಯಾಯಾಂಗ ತನಿಖೆಗೆ ಒಪ್ಪಬೇಕೆಂಬ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಸನ್ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಗೃಹ ಸಚಿವರು ಹೇಳಿದರು. ನಮಗೆ ಅಲ್ಪಸಂಖ್ಯಾತರ ಬಗ್ಗೆ ಬಹಳಷ್ಟು ಕಾಳಜಿ ಇದೆಯೆಂದೂ, ನಾವು ಅವರಿಗೆ ಸಾಕಷ್ಟು ಗ್ರಾಂಟ್ಸ್ ಕೊಟ್ಟಿದ್ದೇವೆಂದೂ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುವ ಒಬ್ಬರನ್ನು ಮಂತ್ರಿಗಳನ್ನಾಗಿಯೂ ಮಾಡಿದ್ದೇವೆಂದರು, ಆದರೆ, ಆ ಘಟನೆ ನಡೆದಿರುವ ಸ್ಥಳಕ್ಕಾಗಲಿ, ಮೈಸೂರಿಗಾಗಲಿ, ಆ ಮಂತ್ರಿಗಳು ಭೇಟಿ ಕೊಟ್ಟಿದ್ದಾರೆಯೇ ಎಂಬ ಬಗ್ಗೆ ಮಾನ್ಯ ಗೃಹ ಸಚಿವರು ಹೇಳಬೇಕು. ಅಂತಹ ಮಂತ್ರಿಗಳನ್ನು ಇಟ್ಟುಕೊಂಡು ಅವರಿಂದ ಒಂದು ವರ್ಗಕ್ಕೆ ನ್ಯಾಯ ಸಿಗುತ್ತದೆಂದರೆ ತಪ್ಪಾಗುತ್ತದೆ. ಇನ್ನೊಂದು ವಿಚಾರ ಹೇಳುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು "ಇದೊಂದು ಷಡ್ಯಂತ್ರ, ಷಡ್ಯಂತ್ರ" ಎನ್ನುತ್ತಾರೆ. ಅದ್ಯಾವುದೋ ಎರಡು ಸಂಘಟನೆಗಳ ಬಗ್ಗೆ ಪ್ರಧಾನಮಂತ್ರಿಗಳಿಗೆ ಪತ್ರ ಬರೆಯುತ್ತೇನೆ, ಆ ಸಂಘಟನೆಗಳನ್ನು ನಿಷೇಧಿಸಬೆಕೆಂದು ಹೇಳುತ್ತಾರೆ. ಹಾಗಾದರೆ, ಕೇವಲ ಎರಡೇ ಸಂಘಟನೆಗಳೇ ಷಡ್ಯಂತ್ರ ಮಾಡುತ್ತಿರುವುದು? ಭಜರಂಗ ದಳದವರು ಹೋಗಿ ಗಲಾಟೆ ಮಾಡಿರುವುದರ ಬಗ್ಗೆ ಸಿ.ಎಂ.ರವರು ಚಕಾರ ಎತ್ತುವುದಿಲ್ಲ ಎಲ್ಲಿಯೋ ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳೇ ಒಂದು ಪರವಾಗಿ ಮಾತನಾಡುತ್ತಿದ್ದಾರೆ. ವಕಾಲತ್ತು ವಹಿಸುತ್ತಿದ್ದಾರೆ ಎಂಬುದು ಜಗಜ್ಜಾಹೀರಾಗುವಂತೆ ಅವರೇ ತೋರಿಸಿಕೊಳ್ಳುತ್ತಿದ್ದಾರೆ. ಹಾಗಾದರೆ ಒಂದು ಕೋಮಿನವರಿಗೆ ಹೇಗೆ ವಿಶ್ವಾಸ ಬರುತ್ತದೆ? ಮಾನ್ಯ ಮುಖ್ಯಮಂತ್ರಿಗಳೇ ಈ ರೀತಿ ಮಾತನಾಡುವಾಗ ಇನ್ನು ಅಧಿಕಾರಿಗಳು ಯಾವ ರೀತಿ ನ್ಯಾಯ ದೊರಕಿಸಿಕೊಡುತ್ತಾರೆ? ಆದುದ್ದರಿಂದ ದಯಮಾಡಿ ತಮ್ಮ ಮುಖಾಂತರ ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಇದರ ಬಗ್ಗೆ ನ್ಯಾಯಾಂಗ ತನಿಖೆಯೇ ಆಗಬೇಕು.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಏಪ್ರಿಲ್ 2ನೇ ತಾರೀಖು ಮೈಸೂರಿನಲ್ಲಿ....

[ಗೊಂದಲ]

ಅಧ್ಯಕ್ಷರು:– ಮಾನ್ಯ ಸಿದ್ದು ಸವದಿಯವರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ, ಎಲ್ಲರೂ ಈ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಇದರ ಬಗ್ಗೆ ಇನ್ನು ಸಾಕು.

[ಗೊಂದಲ]

ಅಧ್ಯಕ್ಷರು:– ಮಾನ್ಯ ಬಾಲಕೃಷ್ಣರವರೆ, ತಮ್ಮ ಭಾಷಣವನ್ನು ಮುಗಿಸಿ.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ನ್ಯಾಯಾಂಗ ತನಿಖೆ ಮಾಡಬೇಕೆಂದು ನಾವು ಸುಮ್ಮನೆ ಒತ್ತಾಯಿಸುತ್ತಿಲ್ಲ. ಏಪ್ರಿಲ್ 2ನೇ ತಾರೀಖು ಮಾನ್ಯ ಉಸ್ತುವಾರಿ ಸಚಿವರು ಅಧಿಕಾರಿಗಳ ಸಭೆ ನಡೆಸಿದಂತಹ ಸಂದರ್ಭದಲ್ಲಿ, ಈಗ ಪೊಲೀಸ್‌ರಿಂದ ನಾನು ತನಿಖೆ ಮಾಡಿಸುತ್ತೇನೆ, ಚುನಾವಣೆಯಾದ ನಂತರ ನ್ಯಾಯಾಂಗ ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಅದಕ್ಕೆ ಅವರು bind ಆಗಲಿ ಎಂದು ನಾವು ಕೇಳುತ್ತಿದ್ದೇವೆ. ಈ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಲೇಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :– ಮಾನ್ಯ ರೇವಣ್ಣನವರೆ, ನಿಮ್ಮ ಪಕ್ಷದ ಪರವಾಗಿ ಎಲ್ಲವನ್ನೂ ಅವರು ಈಗಾಗಲೇ ಮಾತನಾಡಿದ್ದಾರೆ. ಮತ್ತೆ ಮತ್ತೆ ಅದೇ repeat ಆಗುವುದು ಬೇಡ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ದೊಡ್ಡತನವನ್ನು ತೋರಿಸಬೇಕಾಗುತ್ತದೆ. ಅವರು ತನಿಖೆಗೆ ಏಕೆ ಹೆದರಬೇಕು? ಜಿಲ್ಲಾ ಉಸ್ತುವಾರಿ ಸಚಿವರೇ ಈ ಬಗ್ಗೆ ನ್ಯಾಯಾಂಗ ತನಿಖೆ ಮಾಡಿಸುತ್ತೇವೆಂದು ಒಂದು ಕಡೆ ಹೇಳಿದ್ದಾರೆ. ಇನ್ನೊಂದು ಕಡೆ, ನಮ್ಮ ಆಡಳಿತ ಪಕ್ಷದ ಸದಸ್ಯರೆಲ್ಲಾ ತನಿಖೆ ಮಾಡಿಸಿ, ತನಿಖಾ ವರದಿ ಬರಲಿ ಎಂದು ಹೇಳುತ್ತಿದ್ದಾರೆ. ಅದಕ್ಕೆ ನಾವೇನು ಬೇಡ ಎಂದು ಹೇಳಿದ್ದೇವೆಯೇ? ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ದೊಡ್ಡತನ ತೋರಿಸಬೇಕು. ಪೊಲೀಸ್ ಅಧಿಕಾರಿಗಳಿಗೂ ಸಹ ಆಗ ಆಡಳಿತದಲ್ಲಿ ಬಿಗಿ ಇದೆ ಎನಿಸುತ್ತದೆ. ಉದಾಹರಣೆಗೆ ಹೇಳುವುದಾದರೆ, ಶಾಸಕರನ್ನು ಹೆದರಿಸಿ ಇವತ್ತು ಕೇಸ್‌ಗಳನ್ನು ಹಾಕುತ್ತಿದ್ದಾರೆ. ಕೆಲವು ಕಡೆ ಪೊಲೀಸ್ ಆಫೀಸರ್ಸ್ ಆ ರೀತಿ ಮಾಡುತ್ತಿದ್ದಾರೆ. ನಮ್ಮ ತುರುವೇಕೆರೆಯ ಕೃಷ್ಣಪ್ಪನವರ ಮೇಲೆ ಎಷ್ಟು ಕೇಸುಗಳನ್ನು ಹಾಕಿದ್ದಾರೆ ಎಂಬುದನ್ನು ಕೇಳಿ ನೋಡೋಣ? ನಮ್ಮ ಚಿಕ್ಕನಾಯಕನಹಳ್ಳಿಯ ಸುರೇಶ್ ಬಾಬುರವರ ಮನೆಗೆ ಹೋಗಿ, ನೀವು ನಮ್ಮ ಪಾರ್ಟಿಗೆ ಬರಬೇಕು, ಬರದಿದ್ದರೆ ನಿಮ್ಮ ಮೇಲೆ ಕೇಸ್ ಹಾಕುತ್ತೇವೆಂದು ಹೆದರಿಸಿದ್ದಾರೆ. ಅಂತಹ ಪರಿಸ್ಥಿತಿ ಇವತ್ತು ಇದೆ ಆದ್ದರಿಂದ ನ್ಯಾಯಾಂಗ ತನಿಖೆಗೆ ಕೊಟ್ಟರೆ ಸತ್ಯ ಹೊರಗಡೆ ಬರುತ್ತದೆ. ಇಲ್ಲದಿದ್ದರೆ, ಸರ್ಕಾರವೇ ಇದರಲ್ಲಿ ಷಡ್ಯಂತ್ರ ಮಾಡಿದೆ, ಆಡಳಿತ ಪಕ್ಷದವರೇ ಇದರಲ್ಲಿ ಭಾಗಿಯಾಗಿದ್ದಾರೆಂದು ರಾಜ್ಯದ ಜನತೆಗೆ ನಾವು ವಿಧಾನ ಸಭೆಯ ಮುಖೇನ ತಿಳಿಸಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ ಸರ್ಕಾರ judicial enquiry ಮಾಡುವುದಕ್ಕೆ ಹಿಂದೇಟು ಹಾಕತಕ್ಕದ್ದು ಸರಿಯಲ್ಲ. Because, primA facie we have made out the case. It is a very good case to order for judicial enquiry. ಏಕೆ ನ್ಯಾಯಾಂಗ ತನಿಖೆ ಮಾಡಬೇಕೆಂದು ನಾವು ಬೇಕಾದಷ್ಟು

ಎಳೆಎಳೆಯಾಗಿ ಹೇಳಿದ್ದೇವೆ. District in charge Minister ಕೂಡ ಈ ಬಗ್ಗೆ judicial enquiry ಆಗಬೇಕೆಂದು ಹೇಳಿದ್ದಾರೆ. ಈಗ ಏಕೆ ಆ ರೀತಿ ಹೇಳುವುದಕ್ಕೆ ಅವರು ಹಿಂದೇಟು ಹಾಕುತ್ತಿದ್ದಾರೋ ಗೊತ್ತಿಲ್ಲ. ಅದೆನೇ ಇರಲಿ. ಇಲ್ಲಿ judicial enquiry ಮಾಡಿದರೆ ಮಾತ್ರ ಸತ್ಯ ಹೊರಗಡೆ ಬರುತ್ತದೆ. ಯಾವ ಪೊಲೀಸ್‌ನವರು ಇದ್ದರೂ ಕೂಡ ನಿಮ್ಮ investigationನಲ್ಲಿ ಅಥವಾ ಅವರಿಂದ enquiry ಮಾಡಿಸುವುದರಿಂದ ಸತ್ಯ ಹೊರಗಡೆ ಬರುವುದಿಲ್ಲ. ಯಾವ ಜನರು ನಿಮ್ಮ ಮೇಲೆ ವಿಶ್ವಾಸವಿಲ್ಲವೆಂದು ಇವತ್ತು ಭಾವಿಸಿಕೊಂಡಿದ್ದಾರೆ, ಆ ಜನರಿಗೆ ವಿಶ್ವಾಸ ಬರುವುದಿಲ್ಲ. ನೀವು ಅವರಲ್ಲಿ ನೀವು ಅವರಲ್ಲಿ ವಿಶ್ವಾಸ ಮೂಡಿಸಬೇಕು ಎನ್ನುವುದಾದರೆ, ಈ ರಾಜ್ಯದಲ್ಲಿ ಮತ್ತೆ ಮತ್ತೆ ಇಂತಹ ದುರ್ಘಟನೆಗಳು ಆಗಬಾರದು ಎಂದು ನಿಮಗೆ ಅನ್ನಿಸುವುದಾದರೆ, ನಂಬಿಕೆ ಇಟ್ಟು ನ್ಯಾಯಾಂಗ ತನಿಖೆಗೆ ಆದೇಶಿಸಬೇಕು. ಅದನ್ನು ಬಿಟ್ಟು, ಇದು ಹೀಗೇ ಇರಲಿ, ಹಾವೂ ಸಾಯಬಾರದು, ಕೋಲು ಮುರಿಯಬಾರದು, ಇದರಿಂದ ನಮಗೆ ರಾಜಕೀಯ ಲಾಭವಾಗುತ್ತದೆಂದು ನೀವು ಅಂದುಕೊಳ್ಳುವುದಾದರೆ, ನೀವು ಇದಕ್ಕೆ ಮೊಂಡಾಟ ಮಾಡಬೇಕು. ಇವತ್ತು judicial enquiry ನಡೆಸಲು ನೀವು ಒಪ್ಪಿಕೊಳ್ಳಲೇಬೇಕು. ಅದಕ್ಕೆ ನೀವು ಒಪ್ಪಿಕೊಳ್ಳದಿದ್ದರೆ we will walk out.

ಶ್ರೀ ಬಿ.ಎಸ್.ಯಡಿಯೂರಪ್ಪ:– ನಾನು ನಮ್ಮ ಪ್ರತಿಪಕ್ಷದ ನಾಯಕರಿಗೆ ಮತ್ತು ಸದಸ್ಯರಿಗೆ ವಿನಂತಿಯೊಂದನ್ನು ಮಾಡುತ್ತೇನೆ. ನಮ್ಮ ಸರ್ಕಾರ ಕೋಮು ಗಲಭೆಯನ್ನು ನಡೆಸುವವರು ಯಾರೇ ಆಗಲಿ, ಅವರನ್ನು ರಕ್ಷಣೆ ಮಾಡುವುದಕ್ಕೆ ಸಿದ್ಧವಿಲ್ಲ. ಈ ತಿಂಗಳ ಕೊನೆಯವರೆಗೂ ಇಲ್ಲಿ ಅಧಿವೇಶನ ನಡೆಯುತ್ತದೆ. Investigation ಮಾಡಲಾಗುತ್ತಿದೆ, ಸತ್ಯ ಈಚೆಗೆ ಬರುತ್ತದೆ. ಇದರಲ್ಲಿ ಸಂಚು ಯಾರದು? ಎಂದು ನೀವು ಕೇಳಿದಿರಿ. ನಿಮಗೆ ಗೊತ್ತಿರುವಂತೆ ಇತಿಹಾಸದಲ್ಲಿ KFDಯವರು, popular front of Indiaದವರು, ಬೇರೆ ರಾಜ್ಯದಿಂದ ಬಂದಂತಹ ಉದಾಹರಣೆ ಇದೆಯೇ? ಇದಕ್ಕಾಗಿಯೇ ನಾನು ಇದರಲ್ಲಿ ವ್ಯವಸ್ಥಿತವಾದಂತಹ ಷಡ್ಯಂತ್ರ ಇದೆ ಎಂದು ಹೇಳಿದ್ದು. ಈ ಮನೆಯಿಂದ ಅವರಿಗೆ ರಕ್ಷಣೆ ಕೊಡುವಂತಹ message ಹೋಗಬಾರದು. ನಾವು ಓಟ್ ಬ್ಯಾಂಕ ರಾಜಕಾರಣ ಮಾಡುವುದು ಬೇಡ. ಓಟ್ ಬ್ಯಾಂಕ್ ರಾಜಕಾರಣದಿಂದ ನಿಮಗೇನೂ ಲಾಭವಾಗುವುದಿಲ್ಲ. ಇಷ್ಟು ಮಾತ್ರವೇ ನಾನು ನಿಮಗೆ ಹೇಳಬಯಸುತ್ತೇನೆ.

[ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಜನತಾದಳ [ಜಾತ್ಯಾತೀತ] ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು]

ಶ್ರೀ ಬಿ.ಎಸ್.ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ, ಈ ರಾಜ್ಯದಲ್ಲಿ[9] ಶಾಂತಿ ಸುವ್ಯವಸ್ಥೆ ಕಾಪಾಡಿ, ಅಭಿವೃದ್ಧಿ ಕಾರ್ಯದ ಕಡೆಗೆ ಗಮನ

ಕೊಡುತ್ತಿರುವಂತಹ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆನ್ನುವಂತಹ ವ್ಯವಸ್ಥಿತವಾದಂತಹ ಷಡ್ಯಂತ್ರ, ಪಿತೂರಿ ಇಲ್ಲಿ ನಡೆಯುತ್ತಿದೆ. ಇಲ್ಲದಿದ್ದರೆ, ರಾಜ್ಯದ ಇತಿಹಾಸದಲ್ಲಿ ಮೊದಲನೇ ಬಾರಿಗೆ ಕೇರಳದಿಂದ, ಬೇರೆ ಬೇರೆ ಜಿಲ್ಲೆಗಳಿಂದ KFDಯವರು ಮತ್ತು popular Front of Indiaದ ಜನ ಇಲ್ಲಿಗ್ಯಾಕೆ ಬಂದರು? ಅವರ ಹಿನ್ನೆಲೆ ಏನು? ಅವರ ಉದ್ದೇಶವೇನು? ಕಾನೂನಿನ ಚೌಕಟ್ಟಿನಲ್ಲಿ ಯಾರೋ ಒಬ್ಬ ಅಪರಾಧಿಯನ್ನು ಅಥವಾ ಸಂಶಯ ಇದ್ದಂತಹ ವ್ಯಕ್ತಿಯನ್ನು ಬಂಧನ ಮಾಡಿದ ಮೇಲೆ, ಅವರಿಗೆ ಬೆಂಬಲ ಕೊಟ್ಟು, ತಕ್ಷಣಕ್ಕೆ ಅವರನ್ನು ಬಿಡಬೇಕೆಂದು ಸಾವಿರಾರು ಸಂಖ್ಯೆಯಲ್ಲಿ ಹೊರಗಡೆಯಿಂದ ಬಂದು, ಇಲ್ಲಿರುವಂತಹ ಶಾಂತಿ ಸುವ್ಯವಸ್ಥೆಯನ್ನು ಹಾಳು ಮಾಡುವಂತಹ ವ್ಯವಸ್ಥಿತವಾದಂತಹ ಪಿತೂರಿ ಇಲ್ಲಿ ನಡೆಯುತ್ತಿದೆ. ಮೈಸೂರು ನಗರ ಸಾಂಸ್ಕೃತಿಕ ನಗರವಾಗಿದೆ. ಪ್ರವಾಸೋದ್ಯಮದಲ್ಲಿ ಜಾಗತಿಕವಾಗಿ ಇದು ಪ್ರಸಿದ್ಧಿ ಪಡೆದಿದೆ. ದೇಶದಲ್ಲೇ ಅತಿ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುತ್ತಿರುವಂತಹ ನಗರಗಳಲ್ಲಿ ಮೈಸೂರು ಮುಂಚೂಣಿಯಲ್ಲಿದೆ. ಬಹುಶ: ಇತ್ತೀಚಿನ ದಿನಗಳಲ್ಲಿ ಈ ಮೈಸೂರಿನ ಸಾಂಸ್ಕೃತಿಕ ಉದ್ಯಾನವನದಲ್ಲಿ ಕೆಲವರು ಕೋಮು ಭಾವನೆಯ ವಿಷ ಬೀಜಗಳನ್ನು ಬಿತ್ತುತ್ತಿದ್ದಾರೆ. ನಮ್ಮ ಅಭಿವೃದ್ಧಿಯನ್ನು ಮತ್ತು ಮೈಸೂರಿನ ಖ್ಯಾತಿಯನ್ನು ಸಹಿಸದೇ, ಕೆಲವು ದುಷ್ಟ ಶಕ್ತಿಗಳು ಮತ್ತು ಸಮಾಜ ಘಾತುಕ ಸಂಘಟನೆಗಳು ಸಾಮರಸ್ಯವನ್ನು ಕೆಡಿಸಿ, ಶಾಂತಿ ಭಂಗ ಮಾಡಿ, ವಿವಿಧ ಸಮಾಜಗಳ ನಡುವೆ ಕಂದಕವನ್ನು ಉಂಟು ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಘಟನೆಗಳಲ್ಲಿ ಯಾರೇ ಭಾಗವಹಿಸಿರಲಿ, ಅವರ ಮೇಲೆ ನಿಷ್ಪಕ್ಷಪಾತವಾದಂತಹ ತನಿಖೆಯನ್ನು ನಾವು ಮಾಡುತ್ತೇವೆ. ಗಿರಿಧರ್‌ಗೆ ಅವತ್ತು ಪ್ರಾಣಾಂತಿಕ ಹಲ್ಲೆಯಾದಾಗ, ಪೊಲೀಸ್‌ನವರು ಸೂಕ್ತ ಬಂದೋಬಸ್ತ್ ಮಾಡಿ ಕ್ರಮವನ್ನು ತೆಗೆದುಕೊಳ್ಳದೇ ಇದ್ದರೆ, ಅನೇಕ ರೀತಿಯ ಘಟನೆಗಳಿಗೆ ಇವತ್ತು ಅವಕಾಶವಾಗುತ್ತಿತ್ತು. ಹಗಲು–ರಾತ್ರಿ ಪೊಲೀಸ್‌ನವರು ಶ್ರಮಿಸುತ್ತಿದ್ದಾರೆ. Investigation ಆಗುತ್ತಿದೆ. ಸತ್ಯ ಈಚೆಗೆ ಬರುತ್ತದೆ. ಯಾರೇ ಈ ಒಂದು ದುಷ್ಕೃತ್ಯದಲ್ಲಿ ಪಾಲ್ಗೊಂಡಿದ್ದಾರೆ, ಅವರು ಯಾವುದೇ ಸಂಸ್ಥೆಗೆ ಸೇರಿರಲಿ, ಯಾವುದೇ ವ್ಯಕ್ತಿಗಳಾಗಿರಲಿ, ನಿರ್ದಾಕ್ಷಿಣ್ಯವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ನಾನು ಭರವಸೆ ಕೊಡುತ್ತೇನೆ. ಬಹುಶ: ನಾನು ಪ್ರತಿಪಕ್ಷದ ನಾಯಕರನ್ನು ವಿನಂತಿ ಮಾಡಿದೆ. ನೋಡಿ, ತಮ್ಮ ಹೇಳಿಕೆಯಿಂದ, ನಡವಳಿಕೆಯಿಂದ ಓಟ್ ಬ್ಯಾಂಕ್ ರಾಜಕಾರಣ ಮಾಡುತ್ತಿದ್ದಾರೆ ಎನ್ನುವಂತಹ ಭಾವನೆ ಈ ಮನೆಯಲ್ಲಿ ಯಾರಿಗೂ ಬರುವುದು ಬೇಡ. KFDಯವರು ಮತ್ತು popular Front of Indiaದವರು ಸ್ಪಷ್ಟವಾಗಿ, ನೇರವಾಗಿ ಈ ಶಾಂತಿ ಕದಡುವಂತಹ ಕೆಲಸ ಮಾಡಿದರು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ, ಉದಾಹರಣೆಗಳಿವೆ, ಘಟನೆಗಳು ನಡೆದಿವೆ, ದಾಖಲೆಗಳೆಲ್ಲಾ ಈಗ ಸಿಕ್ಕಿದೆ. ಇಲ್ಲದಿದ್ದರೆ ಹೊರ ರಾಜ್ಯದಿಂದ ಇಲ್ಲಿಗೆ ಬರುವಂತಹ ಪ್ರಶ್ನೆಯೇ

ಬರುತ್ತಿರಲಿಲ್ಲ. ಅದ್ದರಿಂದ, ಇವತ್ತು KFD ಮತ್ತು Popular Front of Indiaದ ಚಟುವಟಿಕೆಗಳೇನಿದೆ, ಮೈಸೂರಿಗೆ ಬಂದು ಶಾಂತಿ ಸುವ್ಯವಸ್ಥೆಯನ್ನು ಹಾಳು ಮಾಡುವಂತಹ ಕೆಲಸಕ್ಕಾಗಿ, ಕೇರಳದಿಂದ ಮತ್ತು ಬೇರೆ ಬೇರೆ ಜಿಲ್ಲೆಗಳಿಂದ ಏನು ಬಂದಿದ್ದರು, ಇಷ್ಟೂ ವರದಿಯನ್ನು ವಿವರವಾಗಿ ನಾನು ಕೇಂದ್ರದ ಗೃಹ ಸಚಿವರಿಗೆ ಕಳುಹಿಸುತ್ತಿದ್ದೇನೆ, ಈ ಬಗ್ಗೆ ಮಾನ್ಯ ಪ್ರಧಾನಿಯವರಿಗೆ ಪತ್ರ ಬರೆಯುತ್ತಿದ್ದೇನೆ. ಎಲ್ಲಾ ಮಾಹಿತಿಯನ್ನು ಅವರಿಗೆ ಕಳುಹಿಸಿಕೊಡುತ್ತೇನೆ. ಸೂಕ್ತವಾದಂತಹ ಕ್ರಮವನ್ನು ಈ ಬಗ್ಗೆ ಕೇಂದ್ರವು ಸಹ ತೆಗೆದುಕೊಳ್ಳಬೇಕು. ಇದು ಕೇವಲ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿಲ್ಲ. ಇಡೀ ದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಹಾಳು ಮಾಡುವಂತಹ ಎಲ್ಲೋ ವ್ಯವಸ್ಥಿತವಾದಂತಹ ಪಿತೂರಿ, ಷಡ್ಯಂತ್ರ ಇಲ್ಲಿದೆ. ಇದಕ್ಕೆ ನಾವ್ಯಾರೂ ಬಲಿಯಾಗದೆ, ನಿಷ್ಪಕ್ಷವಾದಂತಹ enquiryಯನ್ನು ನಾವು ಮಾಡಿಸುತ್ತಿದ್ದೇವೆ, ಸತ್ಯ ಹೊರಗಡೆ ಬರುತ್ತದೆ ಎನ್ನುವಂತಹ ವಿಶ್ವಾಸ ನನಗಿದೆ. ಎಲ್ಲಾ ವಿವರಗಳೂ ಸಿಕ್ಕಿದ ಮೇಲೆ, ಮಾಹಿತಿಯನ್ನು ಈ ಮನೆಗೆ ಮಾನ್ಯ ಗೃಹ ಸಚಿವರು ಒದಗಿಸುತ್ತಾರೆ.

10. ಪ್ರಕಟಣೆ

ವಿಷಯ: ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯು ಅಧಿವೇಶನದ ಅವಧಿಯನ್ನು ವಿಸ್ತರಿಸಿರುವ ಬಗ್ಗೆ.

ಅಧ್ಯಕ್ಷರು:– ಈಗ ಒಂದು ಪ್ರಕಟಣೆ ಇದೆ.

ದಿನಾಂಕ 09.07.2009ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳ ಕಾಣಿಸಿದ ತೀರ್ಮಾನವನ್ನು ಕೈಗೊಳ್ಳಲಾಗಿದೆ.

ಅಧಿವೇಶನದ ಅವಧಿಯನ್ನು ದಿನಾಂಕ 29.07.2009ರವರೆಗೆ ವಿಸ್ತರಿಸಲಾಗಿದೆ. ಪ್ರತಿ ದಿವಸ ಒಂದೊಂದು ವಿಧೇಯಕವನ್ನು ಆದ್ಯತೆಯ ಮೇರೆಗೆ ಚರ್ಚೆಗೆ ತೆಗೆದುಕೊಳ್ಳುವುದು ಹಾಗೂ ಆ ಅವಧಿಯಲ್ಲಿ ಬೇಡಿಕೆಗಳ ಮೇಲೆ ಚರ್ಚೆಯನ್ನು ಕೈಗೊಳ್ಳುವುದು.

Next agenda, ಗಮನ ಸೆಳೆಯುವ ಸೂಚನೆಗಳು ಇತ್ತು. ಅದಾದ ಮೇಲೆ ವಿತ್ತೀಯ ಕಾರ್ಯಕಲಾಪವಿತ್ತು. ಆದರೆ ಪ್ರತಿಪಕ್ಷದವರು ಸದನದಲ್ಲಿ ಇಲ್ಲದಿರುವ ಕಾರಣಕ್ಕಾಗಿ, ಗಮನ ಸೆಳೆಯುವ ಸೂಚನೆಗಳಲ್ಲಿ ಹೆಚ್ಚಿನವು ಪ್ರತಿಪಕ್ಷದ ಸದಸ್ಯರದೇ ಇದ್ದ ಕಾರಣ, ಅದನ್ನು ಮುಂದೆ ತೆಗೆದುಕೊಳ್ಳುತ್ತೇನೆ.

ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

[ಸದನವನ್ನು ರಾತ್ರಿ 7.29 ಗಂಟೆಗೆ ಮುಂದೂಡಲಾಯಿತು. ಸದನವು ಪುನ: ದಿನಾಂಕ 14ನೇ ಜುಲೈ 2009ರಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು]